# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ನಾಲ್ಕನೇ ಅಂತಾರಾಷ್ಟ್ರೀಯ ಯೋಗ ದಿವಸದ (ಜೂನ್ 21) ನಿಮಿತ್ತ ವಿಶ್ವದ ನಾನಾ ದೇಶಗಳಲ್ಲಿ ಯೋಗ ಸಾಧಕರು ಮತ್ತು ಸಾರ್ವಜನಿಕರು ಸಾಮೂಹಿಕ ಯೋಗಾಭ್ಯಾಸ ನಡೆಸಿದರು. ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್‌ನಲ್ಲಿರುವ ಪ್ರಸಿದ್ಧ ಐಫೆಲ್ ಗೋಪುರದ ಮುಂದೆ ನಡೆದ ಯೋಗಾಭ್ಯಾಸದ ಒಂದು ದೃಶ್ಯ.


ಸಂಪುಟ : 39 | ಸಂಚಿಕೆ : 22 | ವಿಳಂಬಿ–ಜ್ಯೇಷ್ಠ | ಕಲಿಯುಗಾಬ್ದ 5120 | 1–7–2018 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಪ್ರಣಬ್ ಮುಖರ್ಜಿ ನಾಗಪುರ ಭೇಟಿಯ ಹಿನ್ನೆಲೆಯಲ್ಲಿ ಕಂಡದ್ದು

## ಎಲ್ಲ ಸದ್ವಿಚಾರಗಳನ್ನು ಸ್ವಾಗತಿಸುವ ಆರೆಸ್ಸೆಸ್ – ಕಾಂಗ್ರೆಸ್ ಮತ್ತಿತರರಿಗೆ ವಿರೋಧಿಸುವುದೇ ವೈಚಾರಿಕತೆ

ಇತ್ತೀಚೆಗೆ (ಜೂನ್ 7) ನಾಗಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತಿಯ ವರ್ಷ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾಜಿ ರಾಷ್ಟ್ರಪತಿ, ರಾಜಕೀಯ ಮುತ್ಸದ್ದಿ, ಹಿರಿಯ ಕಾಂಗ್ರೆಸ್ ನಾಯಕ ಪ್ರಣಬ್ ಮುಖರ್ಜಿ ಭಾಗವಹಿಸಿದ್ದು ಬಹಳ ಚರ್ಚೆಗೆ ಬಂದಿತ್ತು. ಕಾಂಗ್ರೆಸ್ ಮತ್ತಿತರ ತಥಾಕಥಿತ ಸೆಕ್ಯುಲರ್‌ವಾದಿಗಳು ಪ್ರಣಬ್ ಮುಖರ್ಜಿಯವರು ಸಂಘದ ಆಮಂತ್ರಣವನ್ನು ಒಪ್ಪಿದ್ದನ್ನು ವಿರೋಧಿಸಿದವು. ಸ್ವಯಂ ಪ್ರಣಬ್ ಅವರ ಪುತ್ರಿ ಶರ್ಮಿಷ್ಠಾ ಮುಖರ್ಜಿ ತನ್ನ ತಂದೆಯ ನಿರ್ಧಾರವನ್ನು ಪ್ರಶ್ನಿಸಿದರು! ಈ ಎಲ್ಲ ಟೀಕೆಗಳಿಗೆ ತಮ್ಮ ಭಾಷಣದಲ್ಲಿ ಉತ್ತರಿಸಿದ ಪ್ರಣಬ್ ಮುಖರ್ಜಿ ವಸುದೈವ ಕುಟುಂಬಕಮ್ ಎನ್ನುವ ತತ್ವದ ಆಧಾರದ ಮೇಲೆ ರೂಪುಗೊಂಡ ಐದು ಸಾವಿರ ವರ್ಷಗಳ ಇತಿಹಾಸವುಳ್ಳ ಭಾರತದ ಶ್ರೇಷ್ಠ ಇತಿಹಾಸ ಪರಂಪರೆಯನ್ನು ಸ್ಮರಿಸಿಕೊಂಡರು. ದೇಶಪ್ರೇಮ ಮತ್ತು ರಾಷ್ಟ್ರೀಯತೆಗಳನ್ನು ಭಾಷಣದ ಉದ್ದಕ್ಕೂ ಉಲ್ಲೇಖಿಸುತ್ತ ರಾಷ್ಟ್ರೀಯತೆ ಮತ್ತು ದೇಶಪ್ರೇಮಗಳು ಒಂದೇ ನಾಣ್ಯದ ಎರಡು ಮುಖಗಳು ಎಂದು ವರ್ಣಿಸಿದರು. ಸಹಿಷ್ಣುತೆಯ ಪಾಠವನ್ನು ಒತ್ತಿ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವೇದಿಕೆಗೆ ಬಂದ ವಿಭಿನ್ನ ವಿಚಾರಧಾರೆಯವರಲ್ಲಿ ಪ್ರಣಬ್ ಮುಖರ್ಜಿ ಮೊದಲಿಗರೇನಲ್ಲ. ಮಹಾತ್ಮಾ ಗಾಂಧಿ, ಅಂಬೇಡ್ಕರ್, ಜಯಪ್ರಕಾಶ ನಾರಾಯಣ ಮೊದಲಾದ ಹಿರಿಯರಷ್ಟೇ ಅಲ್ಲದೇ ಮಾಜಿ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್, ಡಾ. ಜಾಕೀರ್ ಹುಸೇನ್, ನೀಲಂ ಸಂಜೀವರೆಡ್ಡಿ, ಅಬ್ದುಲ್ ಕಲಾಂ ಮೊದಲಾದವರು ಒಂದಲ್ಲ ಒಂದು ಸಂದರ್ಭದಲ್ಲಿ ಆರೆಸ್ಸೆಸ್‌ಗೆ ಭೇಟಿ ನೀಡಿದ್ದರು, ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ತುರ್ತು ಪರಿಸ್ಥಿತಿಯ ನಂತರ ನಡೆದ ಸಭೆಯೊಂದರಲ್ಲಿ ಮಾಜಿ ಪ್ರಧಾನಿ ದೇವೆಗೌಡರೂ ಆರೆಸ್ಸೆಸ್‌ನ್ನು ಹೊಗಳಿದ್ದರು.

1934ರಲ್ಲಿ ವಾರ್ಧಾದಲ್ಲಿ ನಡೆದ ಸಂಘದ ಶಿಬಿರವನ್ನು ಸಂದರ್ಶಿಸಲು ಹೋಗಿದ್ದರ ಬಗ್ಗೆ ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು. 'ಶಿಬಿರಾರ್ಥಿಗಳಲ್ಲಿ ಜಾತಿಯ ಸೋಂಕು ಕಾಣಿಸಲಿಲ್ಲ. ನಿತ್ಯಜೀವನದ ಕೆಲಸಗಳು ಒಟ್ಟಾಗಿ ಸಾಗುತ್ತಿತ್ತು. ಮರುದಿನ ಸಂಘಟನೆಯ ಸ್ಥಾಪಕ ಡಾ. ಹೆಡಗೇವಾರರಲ್ಲಿ ಆ ಬಗ್ಗೆ ಪ್ರಶ್ನಿಸಿದಾಗ ಸಂಘದಲ್ಲಿ ನಾವು ಅಸ್ಪೃಶ್ಯತೆಯ ನಿವಾರಣಾ ಕಾರ್ಯಕ್ರಮವನ್ನೇನೂ ಮಾಡುವುದಿಲ್ಲ. ನಾವೆಲ್ಲರೂ ಹಿಂದೂಗಳೆಂಬ ಸಕಾರಾತ್ಮಕ ವಿಚಾರವಷ್ಟೇ ಇಲ್ಲಿ ಕೆಲಸ ಮಾಡುತ್ತದೆ ಎಂದು ತಿಳಿಸಿದರು' ಎಂಬುದನ್ನು ಗಾಂಧಿ ಉಲ್ಲೇಖಿಸಿದ್ದರು. 1939ರಲ್ಲಿ ಆರೆಸ್ಸೆಸ್ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅಂಬೇಡ್ಕರ್ 'ಇಲ್ಲಿ ಸವರ್ಣೀಯ, ದಲಿತ ಎಂಬ ಭೇದವಿಲ್ಲದಿರುವುದನ್ನು ಕಂಡು ಸಂತಸವಾಗಿದೆ' ಎಂಬ ಅಭಿಪ್ರಾಯಪಟ್ಟಿದ್ದರು.

ಪಂಡಿತ ನೆಹರು ಅವರಿಗೆ ಆರೆಸ್ಸೆಸ್‌ನ್ನು ಬಗ್ಗೆ ತೀವ್ರ ವಿರೋಧವಿತ್ತು ಎನ್ನುವುದು ಬಹುತೇಕ ತಿಳಿದ ವಿಚಾರ, ಗಾಂಧಿ ಹತ್ಯೆಯ ನೆಪವಾಗಿರಿಸಿ ಆರೆಸ್ಸೆಸ್‌ನ್ನು ಮಟ್ಟಹಾಕಲು ನೆಹರು ಮುಂದಾಗಿದ್ದರು. ಆದರೆ 1962ರ ಚೀನಾ ಯುದ್ಧ ಸಂದರ್ಭದಲ್ಲಿ ಸಂಘದ ಕಾರ್ಯಕರ್ತರು ಯೋಧರಿಗೆ ಅಗತ್ಯ ವಸ್ತುಗಳನ್ನು ಪೂರೈಸುವ, ಸಂತ್ರಸ್ತರ ಕುಶಲ ನೋಡಿಕೊಳ್ಳುವ ಕೆಲಸದಲ್ಲಿ ಪಾಲ್ಗೊಂಡಿದ್ದನ್ನು ಗಮನಿಸಿದ್ದ ನೆಹರೂ, ರಾಷ್ಟ್ರದ ಏಕತೆ ಪ್ರದರ್ಶಿಸುವ ಆಶಯದಿಂದ ಮುಂದಿನ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಲು ಆಹ್ವಾನ ನೀಡಿದ್ದರು. ಆಗಲೂ ಸಾಕಷ್ಟು ವಿರೋಧ ಎದುರಾಗಿತ್ತು. ನೆಹರೂ 'ಎಲ್ಲ ದೇಶ ಭಕ್ತರನ್ನು ಪರೇಡನಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಲಾಗಿದೆ' ಎಂದು ಆಕ್ಷೇಪಗಳನ್ನು ತಳ್ಳಿಹಾಕಿದ್ದರು.

ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟದಲ್ಲಿ ಸಂಘದ ಸ್ವಯಂಸೇವಕರು ತೋರಿದ ದೇಶಪ್ರೇಮ ಮತ್ತು ನಿಃಸ್ಪ್ರಹ ಹೋರಾಟದಿಂದ ಜಯಪ್ರಕಾಶ ನಾರಾಯಣ ಬಹಳವಾಗಿ ಪ್ರಭಾವಿತರಾಗಿದ್ದರು. ಸ್ವಯಂಸೇವಕರೊಂದಿಗೆ ಬೈಟಕ್ಕಿನಲ್ಲಿ ಹಾಗೂ 1974 ಜನಸಂಘದ ರಾಷ್ಟ್ರೀಯ ಅಧಿವೇಶನದಲ್ಲಿಯೂ ಅವರು ಪಾಲ್ಗೊಂಡರು.

ಅಲ್ಲಿಂದಿಲ್ಲಿಗೂ ಸಮಾಜದ ಅನೇಕ ಗಣ್ಯವ್ಯಕ್ತಿಗಳು, ಸಾಧುಸಂತರು, ಉದ್ಯಮಿಗಳು, ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿದವರು ಸಂಘದ ಸಂಪರ್ಕಕ್ಕೆ ಬಂದು, ಸಂಘದ ದೇಶ–ಸಮಾಜಹಿತದ ಕಾರ್ಯಗಳನ್ನು ಸ್ವತಃ ಕಂಡು ಶ್ಲಾಘಿಸಿದ್ದಾರೆ. ಕಳೆದ ಒಂಭತ್ತು ದಶಕಗಳಲ್ಲಿ ಸಮಾಜ ಸಂಘಟನೆಯ ಕಾರ್ಯದಲ್ಲಿ ತೊಡಗಿರುವ ಸಂಘದ ವಿಚಾರಧಾರೆಗೆ ಎಲ್ಲೆಡೆ ನಿರಂತರ ಸಹಕಾರ ಪ್ರೋತ್ಸಾಹ ಸಹಕಾರಗಳು ದೊರಕುತ್ತಲೇ ಬಂದಿವೆ. ಹಾಗೆಯೇ ದೇಶ ಮತ್ತು ಸಮಾಜ ಹಿತದಲ್ಲಿ ಕಾರ್ಯ ನಿರ್ವಹಿಸುವ ಪ್ರತಿಯೊಬ್ಬರನ್ನು ಸಂಘ ಆದರಿಸುತ್ತ ಅವರ ವಿಚಾರಗಳನ್ನು ಸ್ವೀಕರಿಸುತ್ತಲೇ ಬಂದಿದೆ.

ಪ್ರಣಬ್ ಮುಖರ್ಜಿ ಪ್ರತಿನಿಧಿಸುವ ಕಾಂಗ್ರೆಸ್ ಮತ್ತಿತರ ಸಮಾನ ಮನಸ್ಕರು ಅವರನ್ನೇ ವಿರೋಧಿಸಿದರೂ 'ಓರ್ವ ಕಾಂಗ್ರೆಸ್ ನಾಯಕನನ್ನು ಸಂಘದ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು ಏಕೆ?' ಎಂದು ಒಬ್ಬನೇ ಆರೆಸ್ಸೆಸ್ ಸ್ವಯಂಸೇವಕನೂ ಆಕ್ಷೇಪಿಸಲಿಲ್ಲ. ವಸ್ತುತಃ ಸಂಘದ ಸ್ವಯಂಸೇವಕರು ಪ್ರಣಬ್ ಓರ್ವ ನುರಿತ ರಾಜಕೀಯ ಮುತ್ಸದ್ದಿ ಮತ್ತು ಚಿಂತಕ, ದೇಶದ ಮಾಜಿ ರಾಷ್ಟ್ರಪತಿ ಎಂದು ಕಂಡರೇ ಹೊರತು ಅವರನ್ನು ಕಾಂಗ್ರೆಸ್ಸಿಗನಾಗಿ ಕಾಣಲಿಲ್ಲ.

3 ನೇ ಪುಟಕ್ಕೆ ➢➢



### ಪ್ರಣಬ್ ಭಾಷಣದ ಒಂದೆರಡು ಮುಖ್ಯಾಂಶಗಳು

ಭಾರತವನ್ನು ಒಂದು ಮತ, ಸಿದ್ಧಾಂತ ಅಥವಾ ಅಸಹಿಷ್ಣುತೆಯ ಆಧಾರದ ಮೇಲೆ ವ್ಯಾಖ್ಯಾನಿಸುವ ಯಾವುದೇ ಪ್ರಯತ್ನಗಳು ನಮ್ಮ ರಾಷ್ಟ್ರೀಯತೆಯನ್ನು ದುರ್ಬಲಗೊಳಿಸುತ್ತವೆ.

ಭಾರತದ ರಾಷ್ಟ್ರೀಯತೆ ಹೊರಹೊಮ್ಮಿದ್ದು ವಸುಧೈವ ಕುಟುಂಬಕಮ್ ತತ್ವದಿಂದ. ಸರ್ವವನ್ನೂ ಸಮಭಾವದಿಂದ ಗೌರವಿಸುವ ನೆಲೆಯಿಂದ. ಬಹುತ್ವವೇ ಭಾರತದ ಆತ್ಮ, ಸಹಿಷ್ಣುತೆಯೇ ನಮ್ಮ ಬಲ, ನಾವು ನಮ್ಮ ವೈವಿಧ್ಯತೆಯನ್ನು ಸಂಭ್ರಮಿಸುತ್ತೇವೆ.

ಕಳೆದ ಐದು ಸಾವಿರ ವರ್ಷಗಳಿಂದ ಆಕ್ರಮಣ ಮತ್ತು ಹೋರಾಟಗಳ ಗೆಲುವು ಸೋಲುಗಳ ನಡುವೆಯೂ ನಮ್ಮ ದೇಶ ಒಂದಾಗಿ ಉಳಿದಿದೆ.

ಭಾರತದಲ್ಲಿ 122 ಭಾಷೆಗಳು 1600 ಆಡುಭಾಷೆಗಳು ಅನೇಕ ಜಾತಿ ಪಂಗಡಗಳನ್ನು ಕಾಣಬಹುದಾಗಿದೆ. ಆದರೆ ಸಂವಿಧಾನ ಮತ್ತು ಭಾರತೀಯರೆನ್ನುವ ಗುರುತು ನಮ್ಮನ್ನು ಒಂದಾಗಿಸಿದೆ.

ಸಂವಿಧಾನದಿಂದ ನಮ್ಮ ರಾಷ್ಟ್ರೀಯತೆ ಪ್ರವಹಿಸುತ್ತದೆ. ಭಾರತೀಯ ರಾಷ್ಟ್ರೀಯತೆಯ ರಚನೆ ಸಾಂವಿಧಾನಿಕ ರಾಷ್ಟ್ರಭಕ್ತಿ.

❝

**ಕೆಲವು ವರ್ಷಗಳ ಹಿಂದೆ ಭಾರತ ಭೇಟಿಗೆ ಬಂದಿದ್ದ ಕಮ್ಯುನಿಸ್ಟ್ ಪಾರ್ಟಿ ಆಫ್ ಚೈನಾದ ನಿಯೋಗವೊಂದು ಆರೆಸ್ಸೆಸ್‌ನ್ನು ಭೇಟಿ ಮಾಡಲು ಬಯಸಿತು. ಒಂದು ರಾಜಕೀಯ ಪಕ್ಷವಾದ ಚೀನಾದ ಕಮ್ಯುನಿಸ್ಟ್ ಪಕ್ಷ ಭಾರತದ ರಾಜಕೀಯ ಪಕ್ಷಗಳನ್ನು ಭೇಟಿಯಾಗುವುದು ಸಹಜ, ಆದರೆ ಸಂಘದ ಸ್ವಯಂಸೇವಕರನ್ನು ಭೇಟಿಯಾಗಬಯುಸುವುದು ಏಕೆ? ರಾಜಕೀಯ ಪಕ್ಷವಾದ ಕಮ್ಯುನಿಸ್ಟ್ ಪಾರ್ಟಿ ಸರ್ಕಾರದ ಅಧಿಕಾರಕ್ಕಾಗಿ ಮತ್ತು ಅಧಿಕಾರದ ಮೂಲಕ ಕಾರ್ಯನಿರ್ವಹಿಸುತ್ತದೆ, ಆದರೆ ಸಂಘ ಸಮಾಜದೊಂದಿಗೆ ಮತ್ತು ಜನರ ಸಹಭಾಗಿತ್ವದಲ್ಲಿ ಕೆಲಸ ಮಾಡುತ್ತದೆ. ಈ ರೀತಿಯ ಭಿನ್ನತೆಯಿದೆ. ಆದರೆ ಒಂದು ಕಾರ್ಯಕರ್ತ ಕೇಡರ್ ಆಧಾರಿತ ಸಂಘಟನೆಯಾದ ಚೀನಾದ ಕಮ್ಯುನಿಸ್ಟ್ ಪಕ್ಷ ಇನ್ನೊಂದು ಕಾರ್ಯಕರ್ತ ಆಧಾರಿತ ಸಂಘಟನೆ ಆರೆಸ್ಸೆಸ್‌ನೊಂದಿಗೆ ವಿಚಾರ ವಿನಿಮಯ, ಚಿಂತನೆ ನಡೆಸಲು ಬಯಸಿತ್ತು. ಭಿನ್ನತೆಯ ಹೊರತಾಗಿಯೂ ಚೀನಾದ ಕಮ್ಯುನಿಸ್ಟ್ ಪಕ್ಷದ ನಿಯೋಗ ಮತ್ತು ಸಂಘದ ಕಾರ್ಯಕರ್ತರ ಭೇಟಿ ಸೌಹಾರ್ದಯುತವಾಗಿತ್ತು.**

❞

❝

### ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕರು ತಮ್ಮ ಭಾಷಣದಲ್ಲಿ ಹೇಳಿದ್ದು...

**ವಿಚಾರಗಳ ವಿನಿಮಯ ಭಾರತೀಯ ಸಂಪ್ರದಾಯದ ಒಂದು ಭಾಗ. ಅದರಂತೆಯೇ ಸಂಘ ಪ್ರಣಬ್ ಮುಖರ್ಜಿಯವರನ್ನು ಆಹ್ವಾನಿಸದೆ ಅವರೂ ಒಪ್ಪಿದ್ದಾರೆ. ನಮ್ಮೆಲ್ಲ ವೈವಿಧ್ಯತೆಗಳ ಹೊರತಾಗಿಯೂ ನಾವೆಲ್ಲ ಭಾರತ ಮಾತೆಯ ಮಕ್ಕಳು. ಯಾವ ಭಾರತೀಯನೂ ನಮಗೆ ಅಸ್ಪ್ರಶ್ಯನಲ್ಲ. ರಾಷ್ಟ್ರ ಕಾರ್ಯದಲ್ಲಿ ಸಮಾಜ ಸಮರ್ಥವಾಗಿರುವಂತೆ ಮಾಡಲು ನಾವು ಶ್ರಮಿಸುತ್ತೇವೆ. ಇದಕ್ಕಾಗಿ ಶಿಸ್ತು ಮತ್ತು ಅನುಶಾಸನಬದ್ಧ ಸಮರ್ಥ ನಾಗರಿಕರನ್ನು ರೂಪಿಸಿ ಅವರು ರಾಷ್ಟ್ರದ ಆಸ್ತಿಯಾಗುವಂತೆ ಮಾಡಲು ಸಂಘ ಕೆಲಸ ಮಾಡುತ್ತಿದೆ. ಸಂಘ ಕೇವಲ ಹಿಂದುಗಳಿಗೆ ಸೀಮಿತವಲ್ಲ. ಈ ಮಾತೃಭೂಮಿಯನ್ನು ಪೂಜಿಸುವ ಪ್ರತಿಯೊಬ್ಬ ದೇಶಭಕ್ತನನ್ನೂ ಸಂಘ ಗೌರವಿಸುತ್ತದೆ ಹಾಗೂ ಅವರ ಅಭಿಪ್ರಾಯವನ್ನು ಸ್ವಾಗತಿಸುತ್ತದೆ.**

❞

# ಭಗವತಿ ಚರಣ್ ವೊಹ್ರಾ (4/07/1904 – 28/07/1930)

ಭಗವತಿ ಚರಣ್ ವೊಹ್ರಾ ಭಾರತೀಯ ಸ್ವಾತಂತ್ರ್ಯ ಹೋರಾಟದ ಓರ್ವ ಮಹಾನ್ ಕ್ರಾಂತಿಕಾರಿ ಸಿಪಾಯಿ. ಹಿಂದೂಸ್ತಾನ್ ಪ್ರಜಾತಾಂತ್ರಿಕ ಸೋಷಲಿಸ್ಟ್ ಪಾರ್ಟಿಯ ಸದಸ್ಯ. ಭಗತ್ ಸಿಂಗ್, ಚಂದ್ರಶೇಖರ್ ಆಜಾದರ ಸಹಚರ.

ಭಗವತಿ ಚರಣ್ ಹುಟ್ಟಿದ್ದು ಆಗ್ರಾದಲ್ಲಿ. ಅವರ ತಂದೆ ಶಿವಚರಣ್ ವೊಹ್ರಾ ರೈಲ್ವೆಯ ಉನ್ನತ ಅಧಿಕಾರಿಯಾಗಿದ್ದರು. ನಂತರ ಅವರು ಆಗ್ರಾದಿಂದ ಲಾಹೋರಿಗೆ ಬಂದು ನೆಲೆಸಿದರು. ಅವರದ್ದು ಆರ್ಥಿಕವಾಗಿ ಶ್ರೀಮಂತ ಕುಟುಂಬವಾಗಿತ್ತು. ಭಗವತಿ ಚರಣರವರ ಆರಂಭಿಕ ಶಿಕ್ಷಣ ಲಾಹೋರ್‌ನಲ್ಲಿ ಮೊದಲಾಯಿತು. ಚಿಕ್ಕ ವಯಸ್ಸಿನಲ್ಲೇ ಅವರ ಮದುವೆಯೂ ಆಯಿತು. ಅವರ ಪತ್ನಿಯ ಹೆಸರು ದುರ್ಗಾ. ನಂತರದ ಸಮಯದಲ್ಲಿ ಅವರ ಪತ್ನಿಯೂ ಕ್ರಾಂತಿಕಾರಿ ಕೆಲಸಗಳಲ್ಲಿ ಸಕ್ರಿಯರಾಗಿದ್ದರು. ಸಹ ಕ್ರಾಂತಿಕಾರಿಗಳಿಗೆಲ್ಲ ಅವರು ಅಕ್ಕರೆಯ "ದುರ್ಗಾ ಭಾಬಿ" ಯಾಗಿದ್ದರು.


ಲಾಹೋರ್ ರಾಷ್ಟ್ರೀಯ ಕಾಲೇಜಿನಲ್ಲಿ ಶಿಕ್ಷಣದ ಸಮಯದಲ್ಲಿ, ಭಗವತಿ ಚರಣರು ವಿದ್ಯಾರ್ಥಿಗಳ ಅಧ್ಯಯನ ತಂಡವೊಂದನ್ನು ರಚಿಸಿದರು. ಗುಂಪಿನಲ್ಲಿ ನಿಯಮಿತವಾಗಿ ಸೇರಿಕೊಂಡವರಲ್ಲಿ ಭಗತ್ ಸಿಂಗ್, ಸುಖದೇವ್ ಪ್ರಮುಖರು. ಅಧ್ಯಯನ ತಂಡದಲ್ಲಿ ದೇಶದ ಪಾರತಂತ್ರ್ಯ ಮತ್ತು ಸ್ವಾತಂತ್ರ್ಯಗಳಿಕೆಯ ವಿಷಯಗಳ ಬಗ್ಗೆ ಗಹನ ಚರ್ಚೆಗಳು ನಡೆಯುತ್ತಿದ್ದವು. ನಂತರ, ಈ ತಂಡ "ನೌಜವಾನ್ ಭಾರತ್ ಸಭಾ" ಎಂಬ ತರುಣ ಸಂಘಟನೆಯನ್ನು ಸ್ಥಾಪಿಸಿತು. 1921ರ ವಿದ್ಯಾರ್ಥಿ ದೆಸೆಯಲ್ಲಿ ಭಗವತಿ ಚರಣ್ ಗಾಂಧೀಜಿಯವರ ಕರೆಗೆ ಓಗೊಟ್ಟು ಅಸಹಕಾರ ಚಳವಳಿಯಲ್ಲಿಯೂ ಧುಮುಕಿದರು.

ಏಪ್ರಿಲ್ 1928 ರಲ್ಲಿ ನೌಜವಾನ್ ಭಾರತ್ ಸಭಾದ ಘೋಷಣಾಪತ್ರ ಪ್ರಕಟವಾಯಿತು. ಭಗತ್ ಸಿಂಗ್ ಮತ್ತು ಇತರ ಸಹಚರರ ಸಲಹೆಗಳ ಮೇರೆಗೆ ಪತ್ರಕ ಸಿದ್ಧಪಡಿಸುವ ಕಾರ್ಯ ಭಗವತಿ ಚರಣ್ ವಹಿಸಿಕೊಂಡರು. ಅವರು ಸಂಸ್ಥೆಯ ಮೆದುಳಾಗಿದ್ದರು. ಚಿಂತಕ, ಸಂಘಟಕ, ಭಾಷಣಕಾರ, ಪ್ರಚಾರಕರ್ತ, ನಿಷ್ಠೆ, ಬದ್ಧತೆ, ಪೂರ್ಣ ಸಮರ್ಪಣೆಯೊಂದಿಗೆ ಯಾವುದೇ ಕೆಲಸವನ್ನು ಪೂರೈಸುವ ಗುಣಗಳು ಭಗವತಿಯವರಲ್ಲಿದ್ದವು. 1924ರಲ್ಲಿ, ಪ್ರಸಿದ್ಧ ಕ್ರಾಂತಿಕಾರಿ ಶಚಿಂದ್ರನಾಥ್ ಸನ್ಯಾಲರ ಹಿಂದೂಸ್ಥಾನ್ ಪ್ರಜಾತಾಂತ್ರಿಕ್ ಸಂಘದ ಘೋಷಣಾಪತ್ರ – "ದಿ ರೆವಲ್ಯೂಶನರಿ" ಯನ್ನು ವ್ಯಾಪಕವಾಗಿ ಆದರೆ ಗೌಪ್ಯವಾಗಿ ವಿತರಿಸುವ ಪ್ರಮುಖ ಜವಾಬ್ದಾರಿಯನ್ನು ಸಮರ್ಥವಾಗಿ ಅವರು ನಿರ್ವಹಿಸಿದರು.



ಲಖನೌನ ಕಾಕೋರಿ ಪ್ರಕರಣ, ಲಾಹೋರ್ ಪಿತೂರಿ ಪ್ರಕರಣ ಮತ್ತು ನಂತರ ಲಾಲಾ ಲಜಪತ್ ರಾಯರನ್ನು ಹತ್ಯೆಗೈದ ಇಂಗ್ಲಿಷ್ ಅಧಿಕಾರಿ – ಸ್ಯಾಂಡರ್ಸ್‌ನ ಕೊಲೆಯಲ್ಲೂ ಭಗವತಿ ಚರಣ್ ಸಹ ಆರೋಪಿಯಾಗಿದ್ದರು. ಆದರೆ ಈ ಆರೋಪಗಳಿಂದಾಗಿ ಅವರೆಂದೂ ಕ್ರಾಂತಿಕಾರಿ ಕೆಲಸಗಳಿಂದ ಹಿಂತೆಗೆಯಲಿಲ್ಲ ಮತ್ತು ಯಾವತ್ತೂ ಪೋಲೀಸರ ಕೈಗೆ ಸಿಗಲೂ ಇಲ್ಲ. ಇದೆಲ್ಲದರ ನಡುವೆಯೇ 23 ಡಿಸೆಂಬರ್ 1929ರಂದು ವಿಶೇಷ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೈಸ್‌ರಾಯ್ ಲಾರ್ಡ್ ಇರ್ವಿನ್‌ನನ್ನು ಬಾಂಬ್ ದಾಳಿಯಲ್ಲಿ ಕೊಲ್ಲುವ ಯೋಜನೆಯ ಎಲ್ಲ ಪ್ರಯತ್ನಗಳ ಹೊರತಾಗಿಯೂ, ವೈಸ್‌ರಾಯ್ ಬದುಕುಳಿದ.

ಲಾಹೋರ್ ಪಿತೂರಿ ಪ್ರಕರಣದಲ್ಲಿ ವಿಚಾರಣೆಗೆ ಒಳಗಾದ ತನ್ನ ಜೊತೆಗಾರ ಭಗತ್ ಸಿಂಗ್ ಮತ್ತು ಇತರರನ್ನು ಜೈಲಿನಿಂದ ಪಾರುಮಾಡುವ ಉದ್ದೇಶದಿಂದ ಬಾಂಬ್ ತಯಾರಿಕೆಯ ಪ್ರಯೋಗವು ರಾವಿ ನದಿಯ




ತಟದಲ್ಲಿ ನಡೆಯುತ್ತಿತ್ತು. ಆದರೆ, ಪ್ರಯೋಗದ ಹಂತದಲ್ಲಿಯೇ ಅದು ಸ್ಫೋಟಗೊಂಡು ಅದರಲ್ಲಿ ತೀವ್ರವಾಗಿ ಗಾಯಗೊಂಡ ಭಗವತಿ ಚರಣ್ 28 ಮೇ 1930 ರಂದು ತಮ್ಮ 25 ವರ್ಷದ ಎಳೆ ವಯಸ್ಸಿನಲ್ಲೇ ಕೊನೆಯುಸಿರೆಳೆದರು.

ಲಾರ್ಡ್ ಇರ್ವಿನ್‌ನನ್ನು ಕೊಲ್ಲಲು ಕ್ರಾಂತಿಕಾರಿಗಳು ನಡೆಸಿದ ಬಾಂಬ್ ಸ್ಫೋಟದಲ್ಲಿ ಆತ ಬದುಕುಳಿದಾಗ ಮಹಾತ್ಮಾ ಗಾಂಧಿ 'ದ ಕಲ್ಟ್ ಆಫ್ ಬಾಂಬ್' ಎನ್ನುವ ಶೀರ್ಷಿಕೆಯ ಲೇಖನವನ್ನು ಬರೆದು ಕ್ರಾಂತಿಕಾರಿಗಳ ಮೇಲೆ ಕಿಡಿಕಾರಿದ್ದರು. ಈ ಲೇಖನಕ್ಕೆ ಪ್ರತ್ಯುತ್ತರವಾಗಿ 'ದ ಫಿಲಾಸಾಫಿ ಆಫ್ ಬಾಂಬ್' ಎನ್ನುವ ಲೇಖನದಲ್ಲಿ ಬರೆದ ಭಗವತಿ ಚರಣ ಹೀಗೆ ಬರೆದಿದ್ದರು – "ಭಾರತದ ಮೇಲೆ ಬ್ರಿಟನ್ ನಡೆಸದೇ ಇರುವ ದುರಾಚಾರ ಒಂದೂ ಇಲ್ಲ. ಉದ್ದೇಶಪೂರ್ವಕ ದುರಾಡಳಿತ ನಮ್ಮನ್ನು ನಿರ್ಗತಿಕರನ್ನಾಗಿಸಿದೆ. ಒಂದು ಜನಾಂಗ ಮತ್ತು ನಾಗರಿಕರಾದ ನಮ್ಮನ್ನು ಅವಮಾನಗೊಳಿಸಿ ನಮ್ಮ ಮೇಲೆ ಅತ್ಯಾಚಾರ ನಡೆಸಲಾಗಿದೆ. ಹೀಗಿದ್ದರೂ ನಾವು ಇವನ್ನೆಲ್ಲ ಮರೆಯಬೇಕು ಮತ್ತು ಅವರನ್ನು ಕ್ಷಮಿಸಬೇಕು ಎಂದು ಕೆಲವರು ಬಯಸುತ್ತಾರೆ? ನಾವು ಪ್ರತೀಕಾರ ತೀರಿಸಬೇಕು – ಪೀಡಕರ ಮೇಲೆ ಜನರಿಗೆ ಇರುವ ಹಕ್ಕಿನ ಪ್ರತೀಕಾರ. ನಾವು ಯಾವುದೇ ದಯೆಯನ್ನು ನಿರೀಕ್ಷಿಸುವುದಿಲ್ಲ ಮತ್ತು ಯಾವ ದಯೆಯನ್ನು ತೋರಿಸುವುದೂ ಇಲ್ಲ. ನಮ್ಮದು ಕೊನೆಯಾಗುವ ವರೆಗಿನ ಸಮರ – ವಿಜಯದ ಕಡೆಗೆ ಅಥವಾ ಮೃತ್ಯುವಿನೆಡೆಗೆ."

## ಪುಸ್ತಕದಿಂದ...

ಪ್ರಾಚೀನ ಕಾಲದಲ್ಲಿ ಜನರು ವಲಸೆ ಹೋಗುತ್ತಿದ್ದುದು ನಿಜವೇ. ಆದರೆ ಅವು ಹೊರಗಿನಿಂದ ಇಂಡಿಯಾಕ್ಕೆ ಅಲ್ಲದೆ ಇಂಡಿಯಾದಿಂದ ಹೊರಕ್ಕೆ ನಡೆದಿವೆ. ಪ್ರಪಂಚದಾದ್ಯಂತ ರುದ್ರ ನರ್ತನ ಗೈದ ಪ್ರಕೃತಿ ವೈಪರೀತ್ಯಗಳ ಕಾರಣ ನದಿ ಬನಗಳು ಬತ್ತಿಹೋದ ಪರಿಣಾಮವಾಗಿ ಕ್ರಿ.ಪೂ.4000ಕ್ಕೂ ಮೊದಲಿನಿಂದಲೇ ಪಶ್ಚಿಮದ ಕಡೆಗೆ ಆರ್ಯ ಸಂತತಿಯವರು ವಲಸೆ ಹೋಗಲಾರಂಭಿಸಿದರು. ಕ್ರಿ.ಪೂ 1900 ರ ವೇಳೆಗೆ ಸರಸ್ವತಿ ನದಿ ಸಂಪೂರ್ಣವಾಗಿ ಒಣಗಿಹೋದುದರಿಂದ ಇರಾನ್, ಪಶ್ಚಿಮ ಏಷ್ಯಾ ಮತ್ತಿತರ ಪ್ರದೇಶಗಳಿಗೆ ವಲಸೆ ಹರಡಿಕೊಂಡಿತು. ಪಶ್ಚಿಮ ಏಷ್ಯಾದಲ್ಲಿ ಸಿಕ್ಕ ಪುರಾತನ ದಾಖಲೆಗಳು, ಪ್ರಾಚೀನ ಇರಾನಿ ಕಥೆಗಳು, ಸಾಹಿತ್ಯಗಳಿಂದ ಈ ಸಂಗತಿ ಖಚಿತಗೊಂಡಿದೆ.



ಈ ರೀತಿ, 'ಇಲ್ಲಿಂದ ಅಲ್ಲಿಗೆ' ಪಯಣಿಸಿದ ಇಂಡೋ–ಆರ್ಯನ್ನರೆ ನಾವು. ಇಂಡೋ–ಯುರೋಪಿಯನ್ ಜನಾಂಗಕ್ಕೆ ನಾವೇ ಮೂಲಪುರುಷರೆಂಬ ಚಾರಿತ್ರಿಕ ಸತ್ಯ ಕಣ್ಣಮುಂದೆ ಕಣ್ಣಿಗೆ ಕಟ್ಟುವ ಹಾಗೆ ಕಾಣುತ್ತಿದ್ದರೂ ...ಅದು ವಾಸ್ತವವೆಂದು ವಿದೇಶಿ ಇತಿಹಾಸಕಾರರು ಕೂಡ ಒಪ್ಪಿದ್ದರೂ ,ಇತಿಹಾಸಕಾರರಾಗಿ ಚಲಾವಣೆಯಾಗುತ್ತಿರುವ ನಮ್ಮ ಮಹಾಮೇಧಾವಿಗಳು ಮಾತ್ರ 'ಅಲ್ಲಿಂದ ಇಲ್ಲಿಗೆ'ಆರ್ಯರ ದಂಡಯಾತ್ರೆಯಾಯಿತು ಎಂಬ ಸಿದ್ಧಾಂತವನ್ನೇ ಹಿಡಿದುಕೊಂಡು ತೂಗಾಡುತ್ತಿದ್ದಾರೆ.

**ಪುಸ್ತಕದ ಹೆಸರು : "ಯಾವುದು ಚರಿತ್ರೆ?"**

ದಾರಿದೀಪವಾಗಬೇಕಾಗಿದ್ದ ಭಾರತದ ನೈಜ ಚರಿತ್ರೆ, ವಿದೇಶಿಯರ ಕೈಯ್ಯಲ್ಲಿ ತಿರುವು ಮುರುವಾಗಿದ್ದನ್ನು, ಮಹಾಕ್ರೂರರನ್ನು ಮಹಾಪುರುಷರಂತೆ, ನಾಡಿನ ವೀರರನ್ನು ಅಲ್ಪರಂತೆ ಚಿತ್ರಿಸಿ, ವಿಧ್ವಂಸಕರನ್ನು ನಿರ್ಮಾತೃಗಳಂತೆ ಹೊಗಳಿ ಹೇಗೆ ನಮ್ಮ ದಾರಿ ತಪ್ಪಿಸಿದ್ದಾರೆಂಬುದರ ವಿಶ್ಲೇಷಣೆಯೇ ಈ ಪುಸ್ತಕ.

**ತೆಲುಗು ಮೂಲ ಲೇಖಕರು : ಎಂ . ವಿ. ಆರ್ .ಶಾಸ್ತ್ರೀ;**

**ಕನ್ನಡಕ್ಕೆ : ಬಾಬು ಕೃಷ್ಣಮೂರ್ತಿ**

## ಎಲ್ಲೋ ಕೇಳಿದ ಕಥೆ

ಒಂದೂರಿನಲ್ಲಿ ಸೂರದಾಸರೆಂಬ ದೈವಭಕ್ತರಿದ್ದರು. ಅವರು ಆಧ್ಯಾತ್ಮದ ಮಾರ್ಗದಲ್ಲಿ ಮುಂದುವರೆಯಲು ಒಬ್ಬ ಯೋಗ್ಯ ಗುರುಗಳಲ್ಲಿ ತಮಗೆ ಮಾರ್ಗದರ್ಶನ ನೀಡಲು ಕೇಳಿಕೊಂಡರು. ಗುರುಗಳಿಗೆ ಸೂರದಾಸರಿಗಿರುವ ವಿಪರೀತ ಕೋಪದ ಕುರಿತಾಗಿ ತಿಳಿದಿತ್ತು. ದೋಷಗಳು ಶಿಷ್ಯನ ಸಾಧನೆಯ ಮಾರ್ಗದಲ್ಲಿ ಅಡ್ಡಿಯಾಗುವುದನ್ನು ತಡೆಯಲು ಸಾಧನೆಗೆ ಮೊದಲು ಅವನನ್ನು ಸಿದ್ಧಗೊಳಿಸಲು ಅವರು ನಿಶ್ಚಯಿಸಿದರು.

ಸೂರದಾಸರೇ, ಮುಂದಿನ ಒಂದು ತಿಂಗಳ ಕಾಲ ನೀವು ನಿಮ್ಮೆಲ್ಲ ಚಟುವಟಿಕೆಗಳನ್ನು ಮಾಡುತ್ತಿರುವಾಗಲೂ ಭಗವಂತನ ನಾಮಜಪವನ್ನು ಮಾಡುತ್ತಿರಿ. ನಂತರ ಸ್ನಾನ ಮಾಡಿ ನನ್ನ ಬಳಿಗೆ ಪುನಃ ಬನ್ನಿ ಎಂದು ಆದೇಶಿಸಿದರು.

ಮರುದಿನದಿಂದಲೇ ಸೂರದಾಸರು ಎಲ್ಲ ಕೆಲಸಗಳ ಜೊತೆಗೆ ನಾಮಜಪವನ್ನು ಮಾಡಹತ್ತಿದರು.

ತಿಂಗಳ ನಂತರ ನದಿಗೆ ಹೋಗಿ ಸ್ನಾನ ಮಾಡಿದರು. ಗುರುಗಳನ್ನು ಭೇಟಿಯಾಗಲು ಹೊಸ ಬಟ್ಟೆಗಳನ್ನು ಧರಿಸಿ ಆಶ್ರಮಕ್ಕೆ ಹೊರಟಾಗ ಮಾರ್ಗ ಮಧ್ಯೆ ಒಬ್ಬ ಕಸಗುಡಿಸುತ್ತಿರುವವನ ಅಲಕ್ಷ್ಯತನದಿಂದ ಅವರ ಬಟ್ಟೆಗಳು ಕೊಳೆಯಾದವು. ಸೂರದಾಸರು ಕೋಪದಿಂದ ಕಸಗುಡಿಸುವವನನ್ನು, "ನೀನೇನು ಮಾಡುತ್ತಿರುವೆ, ಮೂರ್ಖ? ನಾನೀಗ ಹಿಂತಿರುಗಿ ಹೋಗಿ ಬಟ್ಟೆಗಳನ್ನು ಒಗೆದು ಮತ್ತೆ ಸ್ನಾನ ಮಾಡಬೇಕು, ಎಷ್ಟು ಸಮಯ ಹಾಳಾಗುತ್ತದೆ." ಎಂದು ಬೈದರು.

ಈ ಸನ್ನಿವೇಶವನ್ನು ಗಮನಿಸಿದ ಗುರುಗಳು, ಸೂರದಾಸರು ಆಶ್ರಮವನ್ನು ತಲುಪಿದ ಮೇಲೆ "ನೀವು ಮುಂದಿನ ಸಾಧನೆಗೆ ಇನ್ನೂ ತಯಾರಾಗಿಲ್ಲ, ಮುಂದಿನ ಒಂದು ತಿಂಗಳು ಕಾಲ ಎಲ್ಲ ಕೆಲಸಗಳ ಜೊತೆಗೇ ಭಗವಂತನ ನಾಮಜಪವನ್ನು ಮಾಡಿರಿ, ತಿಂಗಳು ಕಳೆದ ನಂತರ ಮತ್ತೆ ಸ್ನಾನ ಮಾಡಿ ನನ್ನನ್ನು ಭೇಟಿಯಾಗಿ" ಎಂದು ಕಳಿಸಿದರು.

ಗುರುಗಳ ಆಜ್ಞೆಯನ್ನು ಒಪ್ಪಿಕೊಂಡ ಸೂರದಾಸರು ನಿತ್ಯಕಾರ್ಯಗಳ ಜೊತೆಗೇ ಭಗವನ್ನಾಮ ಜಪವನ್ನು ಮಾಡಲು ಮರಳಿದರು. ತಿಂಗಳು ಕಳೆದ ನಂತರ ಆಶ್ರಮಕ್ಕೆ ಉತ್ಸಾಹದಿಂದ ಹೋಗುತ್ತಿರುವಾಗ, ಮತ್ತದೇ ಘಟನೆ ಜರುಗಿತು. ಈ ಸಲ ಕಸಗುಡಿಸುತ್ತಿದ್ದವನು ಅಕಸ್ಮಾತ್ತಾಗಿ ತನ್ನ ಹೊಲಸಾದ ಪೊರಕೆಯನ್ನು ಸೂರದಾಸರಿಗೆ ತಾಗಿಸಿದನು. ಮತ್ತೆ ಸೂರದಾಸರು ಕಸಗುಡಿಸುತ್ತಿದ್ದವನ ಮೇಲೆ ಸಿಟ್ಟು ಮಾಡಿಕೊಂಡರು, ಗುರುಗಳು ಅವರನ್ನು ಮರಳಿ ಕಳುಹಿಸಿ ಇನ್ನೊಂದು ತಿಂಗಳ ಕಾಲ ನಾಮಜಪವನ್ನು ಮಾಡಲು ಹೇಳಿದರು.

ಹೀಗೆ ಮೂರು ತಿಂಗಳು ಕಳೆದ ಮೇಲೆ, ಸೂರದಾಸರು ಗುರುಗಳನ್ನು ಕಾಣಲು ಹೋಗುತ್ತಿದ್ದರು. ಕಸಗುಡಿಸುವವನು ಅವರು ಬರುತ್ತಿರುವುದನ್ನು ನೋಡಿ ಹಿಂದೆ ತನ್ನಿಂದ ಆದದ್ದು ಅಕಸ್ಮಾತ್ತಾಗಿ ನಡೆದ ಅಪಚಾರವಾದರೂ ಸೂರದಾಸರು ತನ್ನನ್ನು ಬೈದದ್ದನ್ನು ನೆನಸಿಕೊಂಡು, ಪ್ರತಿಕಾರ ತೀರಿಸಿಕೊಳ್ಳಲು ಇದು ಅವಕಾಶ ಎಂದುಕೊಂಡು ಉದ್ದೇಶಪೂರ್ವಕವಾಗಿ ಕಸದ ಬುಟ್ಟಿಯಲ್ಲಿದ್ದ ಎಲ್ಲ ಕಸವನ್ನು ಅವರ ತಲೆಯ ಮೇಲೆ ಸುರಿದುಬಿಟ್ಟನು.

ಆದರೆ ಆಶ್ಚರ್ಯ ಸೂರದಾಸರು ಈಗ ಕೋಪಿಸಿಕೊಳ್ಳಲಿಲ್ಲ. ಕೈಗಳನ್ನು ಜೋಡಿಸಿ ಆತನಿಗೆ ನಮಸ್ಕಾರ ಮಾಡುತ್ತಾ, "ಅಣ್ಣಾ ನಾನು ನಿನಗೆ ಕೃತಜ್ಞನಾಗಿದ್ದೇನೆ. ನೀನೆ ನನ್ನ ಗುರು. ನೀನು ನನಗೆ ಕೋಪವೆಂಬ ದೋಷದಿಂದ ಹೊರಗೆ ಬರಲು ಕಲಿಸಿರುವಿ" ಎಂದರು. ಕಸಗುಡಿಸುವವನಿಗೆ ಪರಮಾಶ್ಚರ್ಯವಾಯಿತು. ಸೂರದಾಸರು ಗುರುಗಳ ಆಶ್ರಮವನ್ನು ತಲುಪಿದಾಗ ಗುರುಗಳು ಅವರಿಗೋಸ್ಕರ ಕಾಯುತ್ತಿದ್ದರು. ಕ್ರೋಧವನ್ನು ಗೆದ್ದ ಶಿಷ್ಯನ ಮುಂದಿನ ಸಾಧನೆಗೆ ಸಂತೋಷದಿಂದ ಉಪದೇಶ ನೀಡಿದರು.

ಕೋಪವನ್ನು ಗೆದ್ದವರೇ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಲು ಅರ್ಹರು.

ಸಂಪಾದಕೀಯ ಸಹಕಾರ : ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸುನೀಲ್ ಕುಲಕರ್ಣಿ (www.news13.in), ಕೃಷ್ಣಮೂರ್ತಿ ಭಟ್, ಸತ್ಯಾನಾರಾಯಣ ಶಾನಭಾಗ್

## ವಿಶ್ವಸಂಸ್ಥೆಯಲ್ಲಿ ಪ್ರಶಸ್ತಿ ಪಡೆದ ಮಹಿಳಾ ಸುರಕ್ಷತಾ ಸಾಧನ ಅಭಿವೃದ್ಧಿಪಡಿಸಿದ ದೆಹಲಿ ತಂಡ



ಮಹಿಳಾ ಸುರಕ್ಷತೆಗಾಗಿ ಡಿವೈಸ್ ಅಭಿವೃದ್ಧಿಪಡಿಸಿದ ದೆಹಲಿ ಮೂಲದ ಟೆಕ್ನಾಲಜಿ ತಂಡ 1 ಡಾಲರ್ ಮಿಲಿಯನ್ ಅನು ಆಂಡ್ ನವೀನ್ ಜೈನ್ ಎಕ್ಸ್‌ಪ್ರೈಜ್‌ನ್ನು ಪಡೆದುಕೊಂಡಿದೆ. ದೆಹಲಿ ಕಾಲೇಜ್ ಆಫ್ ಎಂಜಿನಿಯರಿಂಗ್ ಪದವೀಧರರಾದ ಮಣಿಕ್ ಮೆಹ್ತಾ, ಅವಿನಾಶ್ ಬನ್ಸಾಲ್, ನಿಹಾರಿಕ ರಾಜೀವ್ ಅವರ ತಂಡ ಅಪಾಯದಲ್ಲಿರುವ ಮಹಿಳೆಯ ಬಗ್ಗೆ ಅಲರ್ಟ್ ನೀಡುವ, ಆಕೆಯಿರುವ ಜಾಗ ತಿಳಿಸುವ, ಯಾರಾದರು ಆಕೆಯ ಸಹಾಯಕ್ಕೆ ಧಾವಿಸುವಂತೆ ಮಾಡುವ ಡಿವೈಸ್‌ನ್ನು ಅಭಿವೃದ್ಧಿಪಡಿಸಿದೆ. ಎಲೆಕ್ಟ್ರಾನಿಕ್ ಡಿವೈಸ್‌ನಂತಹ ಈ ಡಿವೈಸ್‌ಗೆ ಸೇಫರ್ ಪ್ರೋ ಎಂದು ಹೆಸರಿಡಲಾಗಿದ್ದು, ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಭಾರತೀಯ ಮೂಲಕ ಅಮೆರಿಕಾದಲ್ಲಿನ ಟೆಕ್ನಾಲಜಿ ಮತ್ತು ಸ್ಪೇಸ್ ಉದ್ಯಮಿ ನವೀನ್ ಜೈನ್ ಮತ್ತು ಅವರ ಪತ್ನಿ ಅನು ಈ ಪ್ರಶಸ್ತಿಗೆ ಅನುದಾನ ನೀಡುತ್ತಿದ್ದಾರೆ.

## ಯುಪಿ ಬಾಗ್ಪತ್‌ನಲ್ಲಿ 4 ಸಾವಿರ ವರ್ಷ ಹಳೆಯ ರಥ, ಖಡ್ಗಗಳು ಪತ್ತೆ



ಉತ್ತರಪ್ರದೇಶದ ಬಾಗ್ಪತ್ ಜಿಲ್ಲೆಯ ಸಯಿನೋಯಿ ಗ್ರಾಮದಲ್ಲಿ ಕಂಚಿನ ಯುಗಕ್ಕೆ ಸೇರಿದ ರಥಗಳು, ಹಸ್ತಕೃತಿಗಳು ದೊರೆತಿದೆ. ಇದು 2000 ಬಿ.ಸಿ.ಗೆ ಸೇರಿದ್ದಾಗಿದೆ ಎಂದು ಸಂಶೋಧಕರು ಅಭಿಪ್ರಾಯಿಸಿದ್ದಾರೆ. ಪುರಾತತ್ವ ಇಲಾಖೆಯ ಮೂರು ತಿಂಗಳ ನಿರಂತರ ಉತ್ಖನನದ ಬಳಿಕ ರಥ, ಖಡ್ಗ, ಬಾಚಣಿಕೆ, ಆಭರಣ, ಹಸ್ತಕೃತಿ, ಮೂರು ಶವ ಪೆಟ್ಟಿಗೆ ಸೇರಿದಂತೆ ಹಲವಾರು ವಸ್ತುಗಳು ದೊರೆತಿವೆ. ಇವುಗಳು ಸುಮಾರು 4 ಸಾವಿರ ವರ್ಷ ಹಳೆಯದ್ದಾಗಿದೆ ಎನ್ನಲಾಗಿದೆ. 'ಇಷ್ಟು ಪ್ರಾಚೀನ ವಸ್ತುಗಳು ದೊರೆತಿರುವುದು ಅಚ್ಚರಿ ತಂದಿದೆ. ಇವುಗಳು ಸುಮಾರು 4 ಸಾವಿರ ವರ್ಷ ಹಳೆಯದ್ದು ಎಂದು ನಂಬಿದ್ದೇವೆ. 2000–1800 ಬಿ.ಸಿ.ಗೆ ಸಂಬಂಧಿಸಿದ್ದಾಗಿರಬಹುದು' ಎಂದು ಪುರಾತತ್ವ ಇಲಾಖೆ ಅಧಿಕಾರಿ ಡಾ.ಮಂಜುಳಾ ತಿಳಿಸಿದ್ದಾರೆ. ಮೆಸಪಟೊಮಿಯಾ ಕಾಲದಲ್ಲಿ ಈ ರೀತಿಯ ರಥ, ಖಡ್ಗ, ಶಿರಸ್ತ್ರಾಣಗಳನ್ನು ಬಳಸಿದ ಉಲ್ಲೇಖಗಳಿವೆ ಎಂದಿದ್ದಾರೆ.

## ವೈಷ್ಣೋದೇವಿಯಲ್ಲಿ ಯಾತ್ರಿಗಳನ್ನು ರಕ್ಷಿಸಿದ ಯೋಧನಿಗೆ ಮರಣೋತ್ತರ ಪ್ರಧಾನಮಂತ್ರಿ ಪದಕ ಪ್ರದಾನ



ಸಿ.ಆರ್.ಪಿ.ಎಫ್. ಹೆಡ್ ಕಾನ್ಸ್ಟೇಬಲ್ ಹರ್ವಿಂದರ್ ಸಿಂಗ್ ತಮ್ಮ ಜೀವ ಭಯವನ್ನು ತೊರೆದು 2016ರಲ್ಲಿ ವೈಷ್ಣೋದೇವಿ ಪ್ರದೇಶದಲ್ಲಿ ಭೂಕುಸಿತಕ್ಕೆ ಸಿಲುಕಿದ್ದ ಯಾತ್ರಿಕರ ಜೀವವನ್ನು ರಕ್ಷಿಸಿದ್ದರು. ಇಂತಹ ಘಟನೆಯಲ್ಲಿ ಧೀರತನ ಮತ್ತು ಸ್ವತ್ಯಾಗವನ್ನು ಮೆರೆದ ವೀರ ಯೋಧನಿಗೆ ಸರ್ಕಾರವು ಮರಣೋತ್ತರ ಪ್ರಧಾನಮಂತ್ರಿ ಪದಕ ಪ್ರದಾನ ಮಾಡುವ ಮೂಲಕ ಗೌರವಿಸಿದೆ ಎಂದು ಪ್ಯಾರಾಮಿಲಿಟರಿ ವಕ್ತಾರ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಪ್ರತಿದಿನ ಸಾವಿರಾರು ಜನ ಭಕ್ತಾದಿಗಳು ಭೇಟಿ ನೀಡುವ ವೈಷ್ಣೋ ದೇವಿ ದೇವಸ್ಥಾನದಲ್ಲಿ ಸಿ.ಆರ್.ಪಿ.ಎಫ್. ಹೆಡ್ ಕಾನ್ಸ್ಟೇಬಲ್ ಹರ್ವಿಂದರ್ ಸಿಂಗ್ ಅವರನ್ನು ನಿಯೋಜನೆಗೊಳಿಸಲಾಗಿತ್ತು. ಈ ಸಂದರ್ಭದಲ್ಲಿ ಕೆಲ ಮಹಿಳೆ ಮತ್ತು ಮಕ್ಕಳು ಭೂಕುಸಿತದಿಂದ ಕಲ್ಲು ಮಣ್ಣುಗಳಲ್ಲಿ ಸಿಲುಕಿರುವುದನ್ನು ಕಂಡು ಅವರ ರಕ್ಷಣೆಗಾಗಿ ಸಿಂಗ್ ಧಾವಿಸಿದ್ದಾರೆ. ಈ ಜೀವ ರಕ್ಷಣೆ ಭರಾಟೆಯಲ್ಲಿ ಕುಸಿದ ಬಂಡೆಯೊಂದು ಸಿಂಗ್ ತಲೆಗೆ ಅಪ್ಪಳಿಸಿ ಗಂಭೀರ ಗಾಯಗೊಂಡು ಮೃತಪಟ್ಟಿದ್ದರು ಎಂದು ವಕ್ತಾರರು ಹೇಳಿದ್ದಾರೆ. ಜಮ್ಮುವಿನ ರೇಸಿ ಜಿಲ್ಲೆಯ ತ್ರಿಕುಟಾ ಬೆಟ್ಟಗಳಲ್ಲಿ ಭಯೋತ್ಪಾದನೆ ಮತ್ತು ವಿಧ್ವಂಸಕ ಬೆದರಿಕೆಗಳ ವಿರುದ್ಧ ಗುಹೆ ದೇವಾಲಯವನ್ನು ಕಾಪಾಡಲು ಸಿ.ಆರ್.ಪಿ.ಎಫ್. ಕಾರ್ಯ ನಿರ್ವಹಿಸುತ್ತದೆ.

## ಸಾವನ್ನೇ ಗೆದ್ದ ವೀರ ಇಂದು ಸಿಯಾಚಿನ್‌ನಲ್ಲಿ ದೇಶ ಕಾಯುವ ಯೋಧನಾದ



27 ವರ್ಷದ ಇಂಡಿಯನ್ ಮಿಲಿಟರಿ ಅಕಾಡಮಿಯ ಕೆಡೆಟ್ ರಾಜಶೇಖರ್ ಸಾವನ್ನೇ ಗೆದ್ದು ಇಂದು ವಿಶ್ವದ ಅತೀ ಎತ್ತರದ ಯುದ್ಧ ಭೂಮಿ ಸಿಯಾಚಿನ್‌ನಲ್ಲಿ ಯೋಧನಾಗಿ ನಿಯೋಜಿತಗೊಂಡಿದ್ದಾರೆ. ಇದು ಯಾವ ಅದ್ಭುತಕ್ಕಿಂತಲೂ ಕಡಿಮೆಯಲ್ಲ. ಡೆಹ್ರಾಡೂನ್ ಅಕಾಡಮಿಯಲ್ಲಿ ಕೆಡೆಟ್ ಆಗಿ ತರಬೇತಿ ಪಡೆಯುತ್ತಿದ್ದ ಇವರು 'ಪೆಹ್ಲಾ ಕದಮ್' ಅಭ್ಯಾಸದ ವೇಳೆ ಅತೀ ಭಾರವನ್ನು ಹೊತ್ತು 10ಕಿಮೀ ಓಡುತ್ತಿದ್ದ ಸಂದರ್ಭ ಏಕಾಏಕಿ ಕುಸಿದು ಬಿಟ್ಟಿದ್ದರು. ಇವರನ್ನು ಡೆಹ್ರಾಡೂನ್ ಮಿಲಿಟರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ನಿರ್ಜಲೀಕರಣದಿಂದಾಗಿ ಇವರ ಕಿಡ್ನಿ ಮತ್ತು ಲಿವರ್ ಶೇ.70ರಷ್ಟು ಡ್ಯಾಮೇಜ್ ಆಗಿದೆ, ಇವರು ಬದುಕುವುದು ಇನ್ನು ಅನುಮಾನವೇ ಎಂದು ವೈದ್ಯರು ಹೇಳಿದ್ದರು. 40 ದಿನಗಳ ಕಾಲ ಇವರು ಆಸ್ಪತ್ರೆಯಲ್ಲಿ ಜೀವನ್ಮರಣ ಸ್ಥಿತಿಯಲ್ಲಿ ಹೋರಾಟ ನಡೆಸಿದ್ದರು. ಕೊನೆಗೂ ವೈದ್ಯರ ಮಾತನ್ನು ಸುಳ್ಳು ಮಾಡಿ ಇವರು ಬದುಕಿ ಬಂದಿದ್ದಾರೆ. ಆಸ್ಪತ್ರೆಯಿಂದ ಮರಳಿದ ಬಳಿಕ ಜಿಮ್‌ನಲ್ಲಿ ಬೆವರಿಳಿಸಿ ಹಿಂದಿನ ಸಹಜ ಸ್ಥಿತಿಯತ್ತ ಮರಳಿದ್ದಾರೆ.

ಮಿಲಿಟರಿ ಅಕಾಡಮಿಯ ಪ್ರತಿ ಕಠಿಣ ತರಬೇತಿಯನ್ನೂ ದಾಟಿ ಇವರು ಪಾಸ್ ಔಟ್ ಆಗಿದ್ದಾರೆ. ತಮಿಳುನಾಡಿನ ಮಧುರೈ ಮೂಲದ ಇವರು ಎಳೆವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ಹೋರಾಟಕ್ಕೆ ಸಾಥ್ ನೀಡುತ್ತಾ ಬೆಳೆದವರು. ಇಂದು ಅವರು 12ನೇ ಅಸ್ಸಾಂ ರೈಫಲ್ಸ್‌ನಲ್ಲಿ ಸಿಯಾಚಿನ್‌ನಲ್ಲಿ ನಿಯೋಜಿತಗೊಂಡಿದ್ದಾರೆ. ಸಾವನ್ನೇ ಗೆದ್ದ ಈ ಧೀರನಿಗೆ ಸಿಯಾಚಿನ್‌ನ ಪ್ರತಿಕೂಲ ಹವಮಾನ ಕಠಿಣವಾಗಲಾರದು.

## ಸೂಪರ್ 30ಯ 26 ವಿದ್ಯಾರ್ಥಿಗಳು ಐಐಟಿ–ಜೆಇಇ ಪರೀಕ್ಷೆಯಲ್ಲಿ ತೇರ್ಗಡೆ

ಬಡ ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್ ನೀಡಿ ಅವರಿಗೆ ಐಐಟಿಗೆ ಪ್ರವೇಶ ಸಿಗುವಂತೆ ಮಾಡುವ ಬಿಹಾರದ ಸೂಪರ್ 30 ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ? ಈ ಬಾರಿಯೂ ಇಲ್ಲಿ ಕೋಚಿಂಗ್ ಪಡೆದ 30 ವಿದ್ಯಾರ್ಥಿಗಳ ಪೈಕಿ 26ದ್ಯಾರ್ಥಿಗಳು ಐಐಟಿ–ಜೆಇಇ(ಅಡ್ವಾನ್ಸ್‌ಡ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಗಣಿತ ಪರಿಣಿತ ಆನಂದ್ ಕುಮಾರ್ 2002ರಲ್ಲಿ ಸೂಪರ್ 30 ಸ್ಥಾಪನೆ ಮಾಡಿದ್ದು, ಇದರನ್ವಯ 30 ಪ್ರತಿಭಾನಿತ್ವ ಬಡ ವಿದ್ಯಾರ್ಥಿಗಳಿಗೆ ಕೋಚಿಂಗ್ ನೀಡಿ ಅವರನ್ನು ಐಐಟಿ–ಜೆಇಇ ಪರೀಕ್ಷೆಗೆ ಸಜ್ಜುಗೊಳಿಸುತ್ತಾರೆ. ಅಭಿವೃದ್ಧಿಯನ್ನೇ ಕಾಣದ ಕುಗ್ರಾಮಗಳ ವಿದ್ಯಾರ್ಥಿಗಳು ಇವರಲ್ಲಿ ಕೋಚಿಂಗ್ ಪಡೆದು ನಗರದ ವಿದ್ಯಾರ್ಥಿಗಳಿಗೆ ಸ್ಪರ್ಧೆಯೊಡ್ಡುತ್ತಾರೆ. ಮುಂದಿನ ವರ್ಷದಿಂದ 90 ವಿದ್ಯಾರ್ಥಿಗಳನ್ನು ಐಐಟಿ–ಜೆಇಇ ಪರೀಕ್ಷೆಗೆ ತಯಾರು ಮಾಡುವ ಮಹತ್ತರವಾದ ಆಶಯವನ್ನು ಆನಂದ್ ಹೊಂದಿದ್ದಾರೆ.

## ಪ್ಲಾಸ್ಟಿಕ್ ತ್ಯಾಜ್ಯದಿಂದ ಇಂಧನ ಉತ್ಪಾದನೆ: ಐಐಟಿ ಮದ್ರಾಸ್‌ನ ಆವಿಷ್ಕಾರ

ನಿತ್ಯ ರಾಶಿ ರಾಶಿ ಬೀಳುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ನಿರ್ವಹಣೆ ಮಾಡುವುದೇ ದೊಡ್ಡ ಸವಾಲಿನ ಕೆಲಸ. ಈ ಸವಾಲಿನ ಕೆಲಸವನ್ನು ಹಗುರವಾಗಿಸಲು ಐಐಟಿ ಮದ್ರಾಸ್ ಸಂಶೋಧಕರು ವಿನೂತನ ತಂತ್ರವನ್ನು ಆವಿಷ್ಕರಿಸಿದ್ದಾರೆ. ಸೋಲಾರ್ ಪವರ್ ಬಳಸಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಇಂಧನವನ್ನಾಗಿ ಪರಿವರ್ತಿಸುತ್ತಿದ್ದಾರೆ. ಮರು ಬಳಕೆ ಮಾಡಲಾಗದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಇಂಧನವನ್ನಾಗಿ ಪರಿವರ್ತಿಸುವ ಸೋಲಾರ್ ಆಧಾರಿತ ಸಿಸ್ಟಮ್‌ನ್ನು ಇವರು ಅಭಿವೃದ್ಧಿಪಡಿಸಿದ್ದಾರೆ. ಈ ಇಂಧನವನ್ನು ಜನರೇಟರ್, ಫರ್ನೆಸ್, ಎಂಜಿನ್‌ಗಳಲ್ಲಿ ಬಳಸುವ ಡಿಸೇಲ್‌ಗೆ ಪರ್ಯಾಯವಾಗಿ ಬಳಸಬಹುದಾಗಿದೆ. ಐಐಟಿ ಈಗಾಗಲೇ ಸೋಲಾರ್ ಆಧಾರಿತ ಮೊಬೈಲ್ ಯುನಿಟ್‌ವೊಂದನ್ನು ಸ್ಥಾಪನೆ ಮಾಡಿದ್ದು, ಪ್ರಸ್ತುತ ಇದರಲ್ಲಿ ಪ್ರತಿ ಕಿಲೋಗ್ರಾಮ್ ಪ್ಲಾಸ್ಟಿಕ್‌ನಿಂದ 0.7 ಲೀಟರ್ ಇಂಧನ ತಯಾರಿಸಲಾಗುತ್ತಿದೆ. ಪೈರೋಲಿಸಿಸ್ ಎಂಬ ತಂತ್ರಜ್ಞಾನ ಬಳಸಿ ಇಂಧನ ಉತ್ಪಾದನೆ ಮಾಡಲಾಗುತ್ತದೆ. ಆಮ್ಲಜನಕವಿಲ್ಲದೆ ವಸ್ತುವನ್ನು ಹೆಚ್ಚಿನ ತಾಪಮಾನದಲ್ಲಿಟ್ಟು ಥರ್ಮೋಕೆಮಿಕಲ್ ಟ್ರೀಟ್‌ಮೆಂಟ್‌ಗೆ ಒಳಪಡಿಸಿದಾಗ ಫಿಸಿಕಲ್ ಮತ್ತು ಕೆಮಿಕಲ್ ಬದಲಾವಣೆಗಳಾಗುತ್ತದೆ. ಇದರಿಂದ ಇಂಧನ ಉತ್ಪತ್ತಿ ಮಾಡಲಾಗುತ್ತದೆ.


## ಸಾಲುದ್ದದ ಸುದ್ದಿಗಳು

## ಗ್ರಾಮೀಣ ಇಂಟರ್ನೆಟ್ ಸಂಪರ್ಕ ಉತ್ತೇಜನಕ್ಕೆ 4 ಸೆಟ್‌ಲೈಟ್ ಉಡಾವಣೆಗೊಳಿಸುತ್ತಿದೆ ಇಸ್ರೋ



ಡಿಜಿಟಲ್ ಇಂಡಿಯಾ ಯೋಜನೆಯಡಿ ಗ್ರಾಮೀಣ ಭಾಗದ ಇಂಟನೆಟ್ ಸಂಪರ್ಕ ವನ್ನು ಉತ್ತೇಜಿಸಲು ಭಾರತೀಯ ಬಾಹ್ಯಾಕಾಶ ಸಂಸ್ಥೆ (ISRO) 4 ಸೆಟ್‌ಲೈಟ್‌ಗಳನ್ನು ಉಡಾವಣೆಗೊಳಿಸಲು ಸಜ್ಜಾಗಿದೆ. ಈ ಬಗ್ಗೆ ಇಸ್ರೋ ಮುಖ್ಯಸ್ಥ ಕೆ.ಶಿವನ್ ಮಾಹಿತಿ ನೀಡಿದ್ದಾರೆ. ಅಲ್ಲದೇ 'ಚಂದ್ರಯಾನ 2' ಮಿಶನ್ ಕೂಡ ಟ್ರ್ಯಾಕ್‌ನಲ್ಲಿದ್ದು, ಈ ವರ್ಷದ ಅಂತ್ಯದೊಳಗೆ ಉಡಾವಣೆಗೊಳ್ಳುವ ನಿರೀಕ್ಷೆ ಇದೆ. ಪ್ರಸ್ತುತ ಜಿಸ್ಯಾಟ್ 20 ಮತ್ತು ಜಿಸ್ಯಾಟ್ 11 ಉಡಾವಣೆಗೆ ಸಿದ್ಧಗೊಳ್ಳುತ್ತಿದೆ ಎಂದಿದ್ದಾರೆ. ಇತ್ತೀಚಿಗೆ ಕೇಂದ್ರ ನೀಡಿರುವ ರೂ.10,400 ಕೋಟಿ ಬಜೆಟ್ ಫಂಡ್ ಇಸ್ರೋಗೆ ಸ್ಥಳಿಯ ಆರ್ಥಿಕತೆ ಮತ್ತು 10 ಸಾವಿರಕ್ಕೂ ಅಧಿಕ ಉದ್ಯೋಗ ಸೃಷ್ಟಿಗೆ ಸಹಾಯಕವಾಗಿದೆ ಎಂದು ಅವರು ಅಭಿಪ್ರಾಯಿಸಿದ್ದಾರೆ. ಅಲ್ಲದೇ ತಮ್ಮ ಸಂಸ್ಥೆ 30 ದೇಶೀಯ ಮತ್ತು 10 ಹೈಎಂಡ್ ಜಿಎಸ್‌ಎಲ್‌ವಿ ರಾಕೆಟ್‌ಗಳನ್ನು ಮುಂದಿನ ನಾಲ್ಕು ವರ್ಷದೊಳಗೆ ಉತ್ಪಾದಿಸಲಿದೆ ಎಂದಿದ್ದಾರೆ. ಸೆಟ್‌ಲೈಟ್ ಮಾಹಿತಿಗಳನ್ನು ಟ್ಯಾಪ್ ಮಾಡುವ ಪರಿಕರಗಳ 700 ಯುನಿಟ್‌ಗಳು ಸಿದ್ಧಗೊಂಡಿದ್ದು, ಇದರಲ್ಲಿ 500ನ್ನು ಕೇರಳದ ಮೀನುಗಾರರಿಗೆ, 200ನ್ನು ತಮಿಳುನಾಡಿನ ಮೀನುಗಾರರಿಗೆ ನೀಡಲಾಗುತ್ತದೆ ಎಂದಿದ್ದಾರೆ.

➤➤ 1 ನೇ ಪುಟದಿಂದ



### "ಇಂದು ನಾನು ಭಾರತ ಮಾತೆಯ ಓರ್ವ ಶ್ರೇಷ್ಠ ಪುತ್ರನಿಗೆ ಗೌರವ ಮತ್ತು ನಮನಗಳನ್ನು ಸಲ್ಲಿಸಲು ಇಲ್ಲಿ ಬಂದಿದ್ದೇನೆ"

**ಪ್ರಣಬ್ ಮುಖರ್ಜಿಯವರು ಡಾ ಹೆಡಗೆವಾರ್‌ರವರ ಮನೆಯ ಸಂದರ್ಶಕರ ಪುಸ್ತಕದಲ್ಲಿ ಬರೆದದ್ದು**

ಒಟ್ಟಾರೆಯಾಗಿ ಸಂಘವನ್ನು ವಿರೋಧಿಸುವವರ ಹಿನ್ನೆಲೆಯ ಕಾರಣ ಸ್ಪಷ್ಟ. ವೈಚಾರಿಕ ವಿರೋಧ ಎನ್ನುವುದು ತೋರಿಕೆಗಷ್ಟೇ. ಕಾಂಗ್ರೆಸ್ ಮತ್ತಿತರ ತಥಾಕಥಿತ ಸೆಕ್ಯುಲರ್‌ವಾದಿಗಳಿಗೆ ಸಂಘವನ್ನು ವಿರೋಧಿಸುವುದೇ ಅವರ ವೈಚಾರಿಕತೆಯ ಪ್ರಮುಖ ಅಂಶವಾಗಿದೆ. ಇದಕ್ಕೆ ಕಾರಣ ರಾಜಕೀಯ ಲಾಭ ಮತ್ತು ಮತಬ್ಯಾಂಕ್ ಲೆಕ್ಕಾಚಾರ ಎನ್ನುವುದು ಸಹ ಸ್ಪಷ್ಟ. ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರತ್ಯೇಕ ಅಸ್ತಿತ್ವವುಳ್ಳ ರಾಜಕೀಯ ಬಿಜೆಪಿಯೊಂದಿಗೆ ಸಮೀಕರಿಸಿ ಕಾಣುವ ಅವರು ಬಿಜೆಪಿಯನ್ನು ಟೀಕಿಸುವ ಭರದಲ್ಲಿ ಸಂಘವನ್ನು ಎಳೆತರುವುದು. ಇನ್ನೊಂದು ಸಂಘ ಮುಸ್ಲಿಂ ವಿರೋಧಿ ಎಂಬ ಸುಳ್ಳನ್ನು ಬಿಂಬಿಸಿ ಮುಸಲ್ಮಾನ ಮತಬ್ಯಾಂಕ್‌ನ್ನು ಭದ್ರಪಡಿಸಿಕೊಳ್ಳುವ ಪ್ರಯತ್ನ. ಆದರೆ ಈ ಮತಬ್ಯಾಂಕ್ ರಾಜಕೀಯ ಸಮಾಜದ ಹಾಗೂ ವ್ಯಕ್ತಿ ವ್ಯಕ್ತಿಗಳ ನಡುವಿನ ಸೌಹಾರ್ದಯುತ ಸಂಬಂಧ ಮತ್ತು ಮುಕ್ತ ವಿಚಾರ ವಿನಿಮಯದ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ. ಯಾವುದೇ ಸ್ವಸ್ಥ ಸಮಾಜದಲ್ಲಿ ಇದು ಒಳ್ಳೆಯ ಬೆಳವಣಿಗೆ ಅಲ್ಲ.

## 16 ವರ್ಷದ ಬಾಲಕಿ ತೆಲಂಗಾಣದ ಅತೀ ಕಿರಿಯ ಎಂಜಿನಿಯರ್



**10ನೇ ವಯಸ್ಸಲ್ಲಿ 10ನೇ ತರಗತಿ ಪಾಸ್ ಆಗಿದ್ದ ಬಾಲಕಿ ಕಾಶಿಭಟ್ಟ ಸಂಹಿತಾ ಈಗ ತೆಲಂಗಾಣದ ಅತೀ ಕಿರಿಯ ಮಹಿಳಾ ಎಂಜಿನಿಯರ್ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ. 16 ವರ್ಷ ಆಕೆ ಈಗ ಎಲೆಕ್ಟ್ರಿಕಲ್ ಆಂಡ್ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್‌ನಲ್ಲಿ ಪದವಿ ಪೂರೈಸಿದ್ದಾಳೆ. 3ನೇ ವಯಸ್ಸಿನಲ್ಲಿ ಎಲ್ಲಾ ರಾಷ್ಟ್ರಗಳ ರಾಜಧಾನಿಯನ್ನು ಪಟಪಟ ಹೇಳುತ್ತಿದ್ದ ಆಕೆ 10ನೇ ವಯಸ್ಸಲ್ಲಿ 10ನೇ ಕ್ಲಾಸ್ ಪರೀಕ್ಷೆ ಬರೆದು 8.8 ಜಿಪಿಎ ಗಳಿಸಿದ್ದಳು, ಪಿಯುಸಿ ಹಂತದಲ್ಲಿ ಶೇ.89ರಷ್ಟು ಅಂಕ ಗಳಿಸಿದ್ದಳು. ಈಗ 16ನೇ ವಯಸ್ಸಲ್ಲಿ ಎಂಜಿನಿಯರ್ ಪದವಿ ಪೂರೈಸಿದ್ದಾಳೆ. ಆಕೆಗಾಗಿ ತೆಲಂಗಾಣ ಸರ್ಕಾರ ನಿಯಮವನ್ನು ಸಡಿಲಿಸಿ ಎಂಜಿನಿಯರಿಂಗ್ ಪದವಿ ಪಡೆಯಲು ಅವಕಾಶ ಮಾಡಿಕೊಟ್ಟಿತ್ತು. ಅವಕಾಶನ್ನು ಅಸ್ತ್ರವನ್ನಾಗಿ ಬಳಸಿ ಅತೀ ಚಿಕ್ಕ ವಯಸ್ಸಲ್ಲಿ ಅತೀದೊಡ್ಡ ಸಾಧನೆಯನ್ನು ಆಕೆ ಮಾಡಿದ್ದಾಳೆ.**

Date of Publication 25, June 2018

पुंगवा PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST
WITHOUT PREPAYMENT-WPP46 AT BENGALURU PSO, BG-560 026
ON 10TH AND 25TH OF EVERY MONTH REG.NO.CPMG/KA/BGS/102/2018-20

FORTNIGHTLY 1-7-2018



## ಕ್ರೀಡಾಳುಗಳಿಗೂ ಹಿಜಬ್ ಕಡ್ಡಾಯ

# ಅಂತಾರಾಷ್ಟ್ರೀಯ ಚೆಸ್ ಪಂದ್ಯಾಟದಿಂದ ಹೊರಬಂದ ಭಾರತದ ಗ್ರ್ಯಾಂಡ್ ಮಾಸ್ಟರ್

ಮಹಿಳಾ ಆಟಗಾರ್ತಿಯರು ತಲೆಗೆ ಹಿಜಬ್ ಧರಿಸುವುದು ಕಡ್ಡಾಯ ಎಂಬ ನಿಯಮವನ್ನು ವಿರೋಧಿಸಿ ಇರಾನ್‌ನಲ್ಲಿ ನಡೆಯಲಿರುವ ಏಷಿಯನ್ ನೇಶನ್ಸ್ ಕಪ್ ಚೆಸ್ ಟೂರ್ನಿಯಿಂದ ಭಾರತದ ಪ್ರಸಿದ್ಧ ಚೆಸ್ ಕ್ರೀಡಾಪಟು ಸೌಮ್ಯಾ ಸ್ವಾಮಿನಾಥನ್ ಟೂರ್ನಿಯಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿರುವ ಸೌಮ್ಯಾ ಹೇಳಿದ್ದು ಹೀಗೆ– “ಹಿಜಬ್ ಅಥವಾ ಬುರ್ಖಾವನ್ನು ಧರಿಸುವಂತೆ ಒತ್ತಾಯಕ್ಕೆ ಬೀಳುವುದು ನನಗೆ ಇಷ್ಟವಿಲ್ಲ, ಆದ್ದರಿಂ ಇರಾನ್‌ನಲ್ಲಿ ಜೂನ್ 26ರಿಂದ ಆಗಸ್ಟ್ 4ರವರೆಗೆ ನಡೆಯಲಿರುವ ಏಷಿಯನ್ ನೇಶನ್ಸ್ ಕಪ್ ಚೆಸ್ ಚಾಂಪಿಯನ್‌ಷಿಪ್ 2018ರಲ್ಲಿ ಭಾಗವಹಿಸದೇ ಇರಲು ನಿರ್ಧರಿಸಿದ್ದೇನೆ. ಮಹಿಳೆಯರು ಕಡ್ಡಾಯವಾಗಿ ಹಿಜಬ್ ಧರಿಸಬೇಕೆಂಬ ಇರಾನಿನ ನಿಯಮ ನನ್ನ ವೈಯಕ್ತಿಕ ಹಕ್ಕು ಮತ್ತು ಚಿಂತನೆ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳ ಉಲ್ಲಂಘನೆಯಾಗಿದೆ.

ಇಂತಹ ಸನ್ನಿವೇಶದಲ್ಲಿ ನನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಇರಾನಿಗೆ ಹೋಗದೇ ಇರುವುದೇ ಸೂಕ್ತ ಎಂದು ನನಗನ್ನಿಸುತ್ತದೆ.

ಕ್ರೀಡಾಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸುವುದು ಒಂದು ಹೆಮ್ಮೆಯ ವಿಷಯ, ಇಂತಹ ಪ್ರಮುಖ ಪಂದ್ಯಾಟದಲ್ಲಿ ಪಾಲ್ಗೊಳ್ಳಲಾಗದೇ ಇರುವುದರ ಬಗ್ಗೆ ನನಗೆ ಬೇಸರವಿದೆ. ಆದರೆ ಕ್ರಿಡೆಗೆ ಜೀವನದ ಪ್ರಥಮ ಆದ್ಯತೆ ನೀಡುವ ಕ್ರೀಡಾಳುಗಳು ಜೀವನದಲ್ಲಿ ಅನೇಕ ಹೊಂದಾಣಿಕೆಗಳನ್ನು ಮಾಡಿಕೊಳ್ಳುವರಾದರೂ ಕೆಲವೊಂದಿಷ್ಟು ವಿಷಯಗಳಲ್ಲಿ ಹೊಂದಾಣಿಕೆ ಸಾಧ್ಯವಿಲ್ಲ”

ವಸ್ತ್ರಸಂಹಿತೆಯ ನಿಯಮವನ್ನು ವಿರೋಧಿಸಿ ಭಾರತದ ಕ್ರೀಡಾಪಟು ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಹಿಂದೆ ಸರಿದಿರುವುದು ಇದು ಮೊದಲೇನಲ್ಲ. 2016ರಲ್ಲಿ ಭಾರತದ ಶೂಟರ್ ಹೀನಾ ಸಿಧು ಅವರು ಇದೇ ಇರಾನ್‌ನಲ್ಲಿ ಆಯೋಜಿಸಿದ್ದ ಏಷ್ಯನ್ ಏರ್‌ಗನ್ ಸ್ಪರ್ಧೆಯಿಂದ ಇದೇ ಕಾರಣದಿಂದ ಹಿಂದಕ್ಕೆ ಸರಿದಿದ್ದರು.

ಇರಾನ್ ನಲ್ಲಿ ಮಹಿಳೆಯರು ತಲೆಗೆ ಸ್ಕಾರ್ಫ್ ಧರಿಸುವುದು ಕಡ್ಡಾಯ.



ಇದೇ ನಿಯಮವನ್ನು ಇರಾನ್ ಕ್ರೀಡಾ ಇಲಾಖೆ ಅಂತಾರಾಷ್ಟ್ರೀಯ ಚೆಸ್ ಟೂರ್ನಿಗೂ ಅಳವಡಿಸಿದೆ. ತನ್ನ ದೇಶಕ್ಕೆ ಪ್ರವಾಸಕ್ಕೆ ಬರುವವರ ಮೇಲೆಯೂ ಕಟ್ಟರ್ ಇಸ್ಲಾಂ ವಸ್ತ್ರ ಸಂಹಿತೆಯನ್ನು ಇರಾನ್ ಹೇರಲು ಬಯಸುತ್ತದೆ.

# ಸಂಘದ ಬಗ್ಗೆ ನನ್ನ ದೃಷ್ಟಿಕೋನ ಬದಲಾದದ್ದು ಹೇಗೆ?

**–ಜಾಫರ್ ಇರ್ಷಾದ್, ಲಕ್ನೋದ ಪತ್ರಕರ್ತ**

ಒಬ್ಬ ಪತ್ರಕರ್ತನಾಗಿ ಆರೆಸ್ಸೆಸ್ಸಿನ ಅನೇಕ ಕಾರ್ಯಕ್ರಮಗಳ ವರದಿಯನ್ನು ನಾನು ಮಾಡಿದ್ದೇನೆ. ಆದರೆ, ಅವರು ಮಾಡುತ್ತಿರುವ ಸೇವಾಕಾರ್ಯಗಳ ಬಗ್ಗೆ ನನಗೆ ಗೊತ್ತಿರಲಿಲ್ಲ. ಆದರೆ, ಇತ್ತೀಚೆಗೆ ಪ್ರಣವ್ ಮುಖರ್ಜಿಯವರು ಆರೆಸ್ಸೆಸ್ಸಿನ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ನಡೆಯುತ್ತಿರುವ ಚರ್ಚೆಯನ್ನು ನೋಡಿದರೆ, ನಿಃಸ್ವಾರ್ಥ ಭಾವದಿಂದ ಆರೆಸ್ಸೆಸ್ ಮಾಡುತ್ತಿರುವ ಸೇವಾ ಚಟುವಟಿಕೆಗಳ ಬಗ್ಗೆ ಅನೇಕರಿಗೆ ಏನೂ ಮಾಹಿತಿಯಿಲ್ಲ ಎಂದು ಅನ್ನಿಸುತ್ತಿದೆ. ಹಾಗಾಗಿ, ಸಂಘದ ಸೇವಾಕಾರ್ಯದ ಬಗ್ಗೆ ನನ್ನ ಅನುಭವವನ್ನು ನಾನು ಹಂಚಿಕೊಳ್ಳಬಯಸುತ್ತೇನೆ.

ಆ ಸಮಯದಲ್ಲಿ ನಾನು ಒಂದು ಸುದ್ದಿಸಂಸ್ಥೆಯಲ್ಲಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದೆ. 2011 ರ ಜುಲೈ 10 ರಂದು ನನ್ನ ಕಛೇರಿಯಿಂದ ನನಗೆ ಒಂದು ಕರೆ ಬಂತು. ಫತೇಪುರ ಸಮೀಪದ ಮಾಳ್ವಾದಲ್ಲಿ ಒಂದು ರೈಲು ಅಪಘಾತ ಆಗಿದೆಯೆಂದೂ, ಅದರ ವರದಿ ಮಾಡಲು ಅಲ್ಲಿಗೆ ತೆರಳಬೇಕೆಂದೂ ನಮ್ಮ ಸಂಪಾದಕರು ತಿಳಿಸಿದರು. ಅಲ್ಲಿಗೆ ಹೋದೆ. ಅಪಘಾತದ ಭೀಕರತೆಯನ್ನು ನೋಡಿ ಒಂದು ಕ್ಷಣ ದಂಗಾಗಿ ಹೋದೆ. ಆದರೂ, ಸಾವರಿಸಿಕೊಂಡು ವರದಿ ಮಾಡಲು ಶುರುಮಾಡಿದೆ. ಅಲ್ಲಿ ಬಿಳಿ ಅಂಗಿ ಮತ್ತು ಖಾಕಿ ನಿಕ್ಕರ್ ಹಾಕಿಕೊಂಡು ಕೆಲಸ ಮಾಡುತ್ತಿರುವ ಕೆಲವು ವ್ಯಕ್ತಿಗಳು ನನ್ನ ಕಣ್ಣಿಗೆ ಬಿದ್ದರು. ರೈಲಿನ ಅವಶೇಷಗಳ ಅಡಿಯಿಂದ ಶವಗಳನ್ನು ಹೊರತೆಗೆದು ಅವಕ್ಕೆ ಬಿಳಿ ಬಟ್ಟೆ ಮುಚ್ಚಿ ಒಂದೆಡೆ ಜೋಡಿಸಿಡುತ್ತಿದ್ದರು ಅವರು. ಅವರು ಯಾರೆಂದು ಕೇಳಿದ್ದಕ್ಕೆ ಅವರ್ಯಾರೂ ಉತ್ತರ ನೀಡಲಿಲ್ಲ, ತಮ್ಮ ಪಾಡಿಗೆ ತಮ್ಮ ಕೆಲಸವನ್ನು ಮುಂದುವರಿಸಿದರು.

ಸ್ವಲ್ಪ ಸಮಯದ ಬಳಿಕ ಮತ್ತೆ ಅದೇ ವ್ಯಕ್ತಿಗಳು ಅಪಘಾತದಲ್ಲಿ ಬದುಕುಳಿದ ಪ್ರಯಾಣಿಕರಿಗೆ, ಅಲ್ಲಿಗೆ ಬಂದ ಇತರರಿಗೆ ಟೀ ಮತ್ತು ಬಿಸ್ಕೆಟ್ ಹಂಚಲು ಪ್ರಾರಂಭಿಸಿದರು. ನನಗೂ ಟೀ ಕೊಟ್ಟರು. ಈಗ ನನ್ನ ಕುತೂಹಲ ಹೆಚ್ಚಾಯಿತು. ಇವರೆಲ್ಲ ಯಾರು ಎಂದು ತಿಳಿದುಕೊಳ್ಳಲೇಬೇಕೆಂದು ನಿಶ್ಚಯಿಸಿದೆ. ಒಬ್ಬ ಸ್ವಯಂಸೇವಕನನ್ನು ಹಿಂಬಾಲಿಸಿದೆ. ‘ನಿಮಗೆ ಇನ್ನು ಸ್ವಲ್ಪ ಟೀ ಬೇಕಾದರೆ, ಅಲ್ಲಿರುವ ಆಲದ ಮರದ ಕೆಳಗೆ ಬನ್ನಿ’ ಎಂದು ಹೇಳಿ ಆತ ಸರಸರ ನಡೆದ. ನಾನು ಆಲದ ಮರದ ಬಳಿ ಹೋದೆ. ಒಬ್ಬ ಹಿರಿಯ ವ್ಯಕ್ತಿ ಅಲ್ಲಿದ್ದ ಸ್ವಯಂಸೇವಕರಿಗೆ ನಿರ್ದೇಶನಗಳನ್ನು ನೀಡುತ್ತಿದ್ದರು. ಸ್ವಯಂಸೇವಕರ ಬಳಿ ಮಾತನಾಡಲು ಹೋದರೆ, ಅವರು ಯಾರೂ ನನ್ನ ಕಡೆ ಗಮನ ಕೊಡದೇ, ತಮಗೆ ಹೇಳಲಾದ ಕೆಲಸಗಳನ್ನು ಮಾಡಲು ಬೇರೆ ಬೇರೆ ದಿಕ್ಕಿಗೆ ತೆರಳಿದರು.

ಸಂಜೆಯಾಗುತ್ತಿದ್ದಂತೆ, ಮತ್ತೆ ಅದೇ ಹಿರಿಯ ವ್ಯಕ್ತಿ ನನ್ನ ಬಳಿ ಬಂದು ಒಂದು ಪ್ಲಾಸ್ಟಿಕ್ ಚೀಲವನ್ನು ನನಗೆ ಕೊಟ್ಟರು. ನೀವು ಬೆಳಿಗ್ಗೆಯಿಂದ ವರದಿ ಮಾಡಿ ದಣಿದಿದ್ದೀರಿ. ಇದರಲ್ಲಿ ಕೆಲವು ಚಪಾತಿ ಮತ್ತು ಸ್ವಲ್ಪ ಪಲ್ಯವಿದೆ. ಮೊದಲು ಇದನ್ನು ತಿನ್ನಿ ಎಂದರು. ಈ ಬಾರಿ ನಾನು ಸ್ವಲ್ಪ ಬುದ್ಧಿವಂತನಾಗಿದ್ದೆ. ‘ನೀವು ಯಾರು ಎಂದು ಹೇಳದಿದ್ದರೆ, ನಾನು ಇದನ್ನು ತಿನ್ನುವುದಿಲ್ಲ’ ಎಂದೆ. ನನ್ನ ಬಲವಂತಕ್ಕೆ ಕಟ್ಟುಬಿದ್ದ ಅವರು ‘ನಾವೆಲ್ಲ ಆರೆಸ್ಸೆಸ್ಸಿನ ಸ್ವಯಂಸೇವಕರು’ ಎಂದು ಹೇಳಿದರು. ಒಂದು ಕ್ಷಣ ನನಗೆ ಆಶ್ಚರ್ಯವಾಯಿತು. ಆರೆಸ್ಸೆಸ್ಸಿನವರಿಗೆ ಇಂತಹ ಒಂದು ಮಾನವೀಯ ಮುಖವಿದೆ ಎಂಬುದು ನನಗೆ ಗೊತ್ತೇ ಇರಲಿಲ್ಲ.

‘ಸರಿ, ಹಾಗಾದರೆ ನೀವು ಇಲ್ಲಿ ಮಾಡುತ್ತಿರುವ ಸೇವಾಕಾರ್ಯದ ಬಗ್ಗೆ ಸ್ವಲ್ಪ ಹೇಳಿ’ ಎಂದು ನಾನು ಹೇಳಿದೆ. ಅವರು ‘ಅದರ ಅಗತ್ಯವಿಲ್ಲ’ ಎಂದರು. ಮತ್ತೂ ಒತ್ತಾಯಿಸಿದಾಗ, ‘ಇದನ್ನು ಬೇರೆ ಯಾರಿಗೂ ಹೇಳುವ ಅಗತ್ಯವಿಲ್ಲ’ ಎಂದು ಹೇಳಿ ತಾವು ನಡೆಸುತ್ತಿರುವ ಪರಿಹಾರ ಕಾರ್ಯ ಮತ್ತು ವ್ಯವಸ್ಥೆಗಳ ಬಗ್ಗೆ ತಿಳಿಸಿದರು. ಹಾಗೆಯೇ ಅಲ್ಲಿ ಚಹಾ ಮತ್ತು ಉಪಾಹಾರ ತಯಾರಿಸುತ್ತಿರುವ ಮಹಿಳೆಯರೆಲ್ಲ ಈ ಸ್ವಯಂಸೇವಕರ ಮನೆಯವರೇ ಎನ್ನುವುದೂ ತಿಳಿಯಿತು. ಅಪಘಾತದಲ್ಲಿ ಮೃತರಾದವರ ಶವಗಳಿಗೆ ಹೊದೆಸುತ್ತಿದ್ದ ಬಟ್ಟೆ ಆ ಊರಿನ ಒಬ್ಬ ಸ್ವಯಂಸೇವಕರ ಬಟ್ಟೆ ಅಂಗಡಿಯಿಂದ ಉಚಿತವಾಗಿ ಪೂರೈಕೆಯಾಗಿದ್ದು ಎನ್ನುವುದೂ ತಿಳಿಯಿತು. ಇದನ್ನೆಲ್ಲ ವರದಿ ಮಾಡಬಾರದು ಎಂದು ನನಗೆ ನೆನಪಿಸಿ ಅವರು ಅಲ್ಲಿಂದ ಹೊರಟರು.

ಏಳು ವರ್ಷಗಳ ಬಳಿಕ ಈಗ ಹಳೆಯದನ್ನೆಲ್ಲ ಪುನಃ ನೆನಪಿಸಿಕೊಂಡು ಇಲ್ಲಿ ಬರೆಯುತ್ತಿದ್ದೇನೆ. ಒಂದು ವರದಿಯಾಗಿ ಅಲ್ಲ, ಕೇವಲ ಒಬ್ಬ ಮನುಷ್ಯನಾಗಿ ನನ್ನ ಅನುಭವವನ್ನು ಹಂಚಿಕೊಳ್ಳಲಷ್ಟೇ.

ಹೌದು, ಸಂಘದ ಸ್ವಯಂಸೇವಕರು ಮಾಡುತ್ತಿರುವುದು ನಿಃಸ್ವಾರ್ಥ ಸೇವೆಯನ್ನು ಮಾತ್ರ!

ಕೃಪೆ: ಆರ್ಗನೈಸರ್

# ರಾಷ್ಟ್ರೋತ್ಥಾನ ಪರಿಷತ್‌ನ ‘ತಪಸ್’ ನ ಮಕ್ಕಳ ಸಾಧನೆ

ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳ ಉನ್ನತ ಶಿಕ್ಷಣಕ್ಕೆ ಆರ್ಥಿಕವಾಗಿ ನೆರವಾಗುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ ತನ್ನ ಪ್ರಕಲ್ಪವಾದ ತಪಸ್‌ನ ಅಂಗವಾಗಿ ಪ್ರತಿವರ್ಷ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ದು ಅವರಿಗೆ ಉಚಿತ ಪಿಯುಸಿ ಶಿಕ್ಷಣ ಮತ್ತು ಐಐಟಿ ಪರೀಕ್ಷೆಗೆ ತರಬೇತಿ ನೀಡುತ್ತಾ ಬಂದಿದೆ.

ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ 7 ಮಂದಿ ಸಿಇಟಿಯಲ್ಲಿ ಒಂದು ಸಾವಿರದೊಳಗಿನ ರ್‍ಯಾಂಕ್ ಪಡೆದಿದ್ದಾರೆ. ಅಷ್ಟೇ ಅಲ್ಲದೇ, 25 ವಿದ್ಯಾರ್ಥಿಗಳು ಜೆಇಇ (ಜಾಯಿಂಟ್ ಎಂಟ್ರೆನ್ಸ್ ಎಕ್ಸಾಮಿನೇಷನ್)ನ ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಖ್ಯ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ. ಇವರಲ್ಲಿ 6 ಮಂದಿ ವಿದ್ಯಾರ್ಥಿಗಳು ಪ್ರತಿಷ್ಠಿತ ಐಐಟಿಯಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಹಿರೇಕೆರೂರಿನ ಕೃಷಿ ಕುಟುಂಬದ ಶಿವರಾಜ್ ದ್ವಿತೀಯ ಪಿಯುಸಿ ಗಣಿತದಲ್ಲಿ 100 ಅಂಕ, ಹಾವೇರಿಯ ಕೃಷಿ ಕುಟುಂಬದ ಸಮರ್ಥ ಹಾದಿಮನಿ ಗಣಿತದಲ್ಲಿ 99, ಹುಣಸಮಾರನಹಳ್ಳಿಯ ಸಮರ್ಥ ಎಲೆಕ್ಟ್ರಾನಿಕ್ಸ್‌ನಲ್ಲಿ 100 ಅಂಕ ತೆಗೆದು ತಮ್ಮ ಸಾಮರ್ಥ್ಯ ತೋರಿದ್ದಾರೆ. ಗುಬ್ಬಿಯ ಅನಕ್ಷರಸ್ಥ ಕೂಲಿ ಕಾರ್ಮಿಕ ಕುಟುಂಬದ ಕಾಂತರಾಜ್ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ 1252ನೇ ರ್‍ಯಾಂಕ್, ಗಾರೆ ಕೆಲಸ ಮಾಡಿ ಜೀವನ ನಡೆಸುವ ಕುಟುಂಬದ ಗಣೇಶ್ ಮೆಲ್ಲಣ್ಣನವರ 2370ನೇ ರ್‍ಯಾಂಕ್, ಹಿಂದುಳಿದ ಯಾದಗಿರಿ ಜಿಲ್ಲೆಯ ಪರಿಶಿಷ್ಟ ಕೃಷಿಕ ಕುಟುಂಬದ ರವಿಕಿರಣ 3105ನೇ ರ್‍ಯಾಂಕ್.

ಹಾಗೆಯೇ ಸಾಮಾನ್ಯ ಬಡ ಪರಿವಾರಗಳಿಗೆ ಸೇರಿದ ಇನ್ನೂ ಮೂವರು ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಗಳಿಸಿ ಐಐಟಿ ಪ್ರವೇಶಾರ್ಹತೆ ಪಡೆದಿದ್ದಾರೆ.

ಕಳೆದ ಕೆಲವು ವರ್ಷಗಳಲ್ಲಿ ತಪಸ್‌ನಲ್ಲಿ ಓದಿದ ಮಕ್ಕಳು ಹಲವರು ದೇಶದಾದ್ಯಂತ ಹಲವಾರು ಐಐಟಿಗಳಲ್ಲಿ ಓದುತ್ತಿದ್ದು ತಮ್ಮ ವಿದ್ಯಾಭ್ಯಾಸದ ಬಳಿಕ ತಮಗೆ ಬೆಂಬಲ ನೀಡಿದ ಸಮಾಜಕ್ಕೆ ತಮ್ಮ ಕೊಡುಗೆ ನೀಡುವ ಗುರಿಯೊಂದಿಗೆ ಮನ್ನಡೆಯುತ್ತಿದ್ದಾರೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
**ಪುಂಗವ**, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.